# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೭ | ಬೆಂಗಳೂರು, ಗುರುವಾರ, ಫೆಬ್ರವರಿ ೨, ೨೦೧೨ (ಮಾಘ ೧೩, ಶಕ ವರ್ಷ ೧೯೩೩) | ಸಂಚಿಕೆ ೫ |
|---|---|---|




## ವಿಷಯಸೂಚಿ

ದಿನಾಂಕ 02–02–2012

| ವಿಶೇಷ ರಾಜ್ಯಪತ್ರ ಸಂಖ್ಯೆ | ಪ್ರಕಟಣೆ ದಿನಾಂಕ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ |
|---|---|---|
| 29 | 13-01-2012 | No: ED 84 SEP 2007, Bangalore, Dated: 11-01-2012 |
| 30 | 13-01-2012 | ಸರ್ಕಾರದ ಆದೇಶ ಸಂಖ್ಯೆ: ಕಾಇ 40 ಎಲ್‌ಡಬ್ಲ್ಯೂಎ 2011, ಬೆಂಗಳೂರು, ದಿನಾಂಕ: 12–01–2012. |
| 31 | 13-01-2012 | ಸಂಖ್ಯೆ: ಸಂವ್ಯಶಾಇ 43 ಶಾಸನ 2011, ಬೆಂಗಳೂರು, ದಿನಾಂಕ: 13.1.2012 |
| 32 | 16-01-2012 | NO. JKSB/COE/REG/1/2012, BANGALORE, DATED: 16.01.2012 |
| 33 | 16-01-2012 | No. DPAL 02 SAMVYAVI 2011, Bangalore, Dated : 16th January, 2012 |
| 34 | 17-01-2012 | ನಂ. ಚು(2) ವಿವ/48/2011–12, ದಿನಾಂಕ: 16–01–2012 |
| 35 | 17-01-2012 | ನಂ. ಇಎಲ್‌ಎನ್ (2) ಸಿಆರ್ 46/2011–12, ದಿ: 17/01/2012 |
| 36 | 18-01-2012 | No. 56/2011/PPS-II, Dated : 28th December, 2011 |
| 38 | 19-01-2012 | ನಂ. ಕಂಇ 5 ಎಲ್.ಜಿ.ಎಂ. 2012, ಬೆಂಗಳೂರು, ದಿನಾಂಕ: 19ನೇ ಜನವರಿ, 2012 |
| 39 | 19-01-2012 | No. SAMVYASHAE 39 SHASANA 2011, Bangalore, dated: 19.01.2012 |
| 40 | 19-01-2012 | No. FD 07 PES 2011, Bangalore, dated: 19-01-2012 |
| 41 | 19-01-2012 | No. FD 06 PES 2011, Bangalore, dated: 19-01-2012 |
| 42 | 20-01-2012 | ಸಂಖ್ಯೆ: ಸಇ 18 ಎಂಆರ್‌ಇ 2012, ಬೆಂಗಳೂರು, ದಿನಾಂಕ: 19/01/2012 |
| 43 | 20-01-2012 | ಸಂಖ್ಯೆ: ಸಇ 19 ಎಂಆರ್‌ಇ 2012, ಬೆಂಗಳೂರು, ದಿನಾಂಕ: 19/01/2012 |
| 44 | 20-01-2012 | ಸಂಖ್ಯೆ: ಸಿಐ 529 ಎಸ್.ಪಿ.ಕ್ಯೂ. 2011, ಬೆಂಗಳೂರು, ದಿನಾಂಕ : 20.01.2012 |
| 46 | 20-01-2012 | ಸಂಖ್ಯೆ: ಸಿಐ 315 ಎಸ್.ಪಿ.ಕ್ಯೂ. 2011, ಬೆಂಗಳೂರು, ದಿನಾಂಕ : 20.01.2012 |
| 47 | 21-01-2012 | NO. DPAR 215 SLU 2011, BANGALORE, DATED: 21.1.2012 |
| 48 | 21-01-2012 | ಸಂಖ್ಯೆ: ಸಇ 22 ಎಂಆರ್‌ಇ 2012, ಬೆಂಗಳೂರು, ದಿನಾಂಕ: 20/01/2012 |
| 49 | 23-01-2012 | ಸರ್ಕಾರದ ಆದೇಶ ಸಂಖ್ಯೆ : ಸಇ 06 ಸಸಂನೋ 2012, ಬೆಂಗಳೂರು, ದಿನಾಂಕ : 11ನೇ ಜನವರಿ, 2012 |
| 50 | 24-01-2012 | ಸಂಖ್ಯೆ: ಸಂವ್ಯಶಾಇ 49 ಶಾಸನ 2011, ಬೆಂಗಳೂರು, ದಿನಾಂಕ: 24.1.2012 |
| 51 | 24-01-2012 | ಸಂಖ್ಯೆ: ಕಾಇ 5 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 23–01–2012 |
| 52 | 24-01-2012 | ಸಂಖ್ಯೆ: ಕಾಇ 69 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |
| 53 | 24-01-2012 | ಸಂಖ್ಯೆ: ಕಾಇ 74 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |
| 54 | 24-01-2012 | ಸಂಖ್ಯೆ: ಕಾಇ 70 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |
| 55 | 24-01-2012 | ಸಂಖ್ಯೆ: ಕಾಇ 73 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |
| 56 | 24-01-2012 | ಸಂಖ್ಯೆ: ಕಾಇ 33 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 23–01–2012 |
| 57 | 24-01-2012 | ಸಂಖ್ಯೆ: ಕಾಇ 7 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 23–01–2012 |
| 58 | 24-01-2012 | ಸಂಖ್ಯೆ: ಕಾಇ 6 ಎಲ್‌ಎಂಡಬ್ಲ್ಯೂ 2011, ಬೆಂಗಳೂರು, ದಿನಾಂಕ: 23–01–2012 |
| 59 | 24-01-2012 | ಸಂಖ್ಯೆ: ಕಾಇ 127 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |
| 60 | 24-01-2012 | ಸಂಖ್ಯೆ: ಕಾಇ 75 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 23–01–2012 |

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

**http//www.gazette.kar.nic.in**

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

**http//www.gazette.kar.nic.in**

## ೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

| ಕ್ರಮ ಸಂಖ್ಯೆ | ರಾಜ್ಯಪತ್ರದ ಭಾಗಗಳು | ಪ್ರತಿ ಒಂದಕ್ಕೆ ರೂ. ಪೈ. | ವಾರ್ಷಿಕ ಚಂದಾ ದರ ರೂ. ಪೈ. |
|---|---|---|---|
| 1. | ಭಾಗ – 1 .................................... | 21-00 | 831-00 |
| 2. | ಭಾಗ – 2 .................................... | 5-00 | 182-00 |
| 3. | ಭಾಗ – 3 .................................... | 10-00 | 411-00 |
| 4. | ಭಾಗ – 4 .................................... | 3-00 | 109-00 |
| 5. | ಭಾಗ – 4ಎ .................................... | 11-00 | 435-00 |
| 6. | ಭಾಗ – 5 .................................... | 22-00 | 879-00 |
| 7. | ಭಾಗ – 6 (ಬೆಂಗಳೂರು).............................. | 9-00 | 363-00 |
| 8. | ಭಾಗ – 6ಎ (ಮೈಸೂರು).............................. | 25-00 | 964-00 |
| 9. | ಭಾಗ – 6ಬಿ (ಧಾರವಾಡ) .............................. | 45-00 | 1763-00 |
| 10. | ಭಾಗ – 6ಸಿ (ಗುಲ್ಬರ್ಗ) .............................. | 29-00 | 1162-00 |
| 11. | ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .............................. (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ | 81-00 | 3210-00 |
| 12. | ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. | | |

## ೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

| ಕ್ರಮ ಸಂಖ್ಯೆ | ಪ್ರಕಟಣೆ ದರಗಳು | | ಮೊತ್ತ ರೂ. ಪೈ. |
|---|---|---|---|
| 1. | ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ | ... | 500-00 |
| 2. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 11-00 |
| 3. | ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ) | ... | 750-00 |
| 4. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 16-50 |
| 5. | ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ | ... | ½ ಅಥವಾ ¼ ಪುಟಕ್ಕೆ ದರ ನಿಗಧಿ |
| 6. | ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ | ... | ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು |
| 7. | ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ) | ... | 1-00 |

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

**ಸಂಕಲನಾಧಿಕಾರಿಗಳು,**
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೭ | ಬೆಂಗಳೂರು, ಗುರುವಾರ, ಫೆಬ್ರವರಿ ೨, ೨೦೧೨ (ಮಾಘ ೧೩, ಶಕ ವರ್ಷ ೧೯೩೩) | ಸಂಚಿಕೆ ೫ |
|---|---|---|

## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### COMMERCE & INDUSTRIES SECRETARIAT

**Sub :** Participation of Karnataka delegation at Canadian Manufacturing Technology Show at Toranto, Canada.

**Read :** Minutes of the Screening Committee meeting held on 29-09-2011.

**Preamble:**

The Commissioner for Industrial Development and Director of Industries and Commerce has recommended a delegation of the following three officers (1) Shri V. Venugopal, Managing Director, KUM, (2) Shri B. Mahesh, Joint Director, KUM and (3) Shri N. Chandrasekhar, Joint Director [Technical Cell], Commerce and Industries Department for participating in the "India Show" at "Canadian Manufacturing Technology Show" at being organized by EEPC at Toranto, Canada from 17-10-2011 to 20-10-2011.

The Screeing Committee held under the Chairmanship of the Principal Secretary, Commerce and Industries Department on 29-09-2011 has approved the above officers for participating in the event.

Finance Department has given concurance to the proposal of Administrative Department in relaxation of economy orders subject to other approvals from competent Authorities being taken by Commerce & Industries Department Vide Note No. FD 1521 Exp-1/2011, dated : 15-10-2011.

Hence the following order.

**Government Order No. CI 223 SPI 2011, Bangalore Dated: 25th November 2011.**

In the circumstances explained above, the deputation of Shri B. Mahesh, Joint Director, KUM, and Shri N. Chanrasekhar, Joint Director [Technical Cell], Commerce and Industries Department to participate in the "India Show" at "Canadian Manufacturing Technology show" held at Toranto, Canada from 17-10-2011 to 20-10-2011 is approved and the journey made is also ratified.

This expenditure in this behalf will be borne by the State Government.

By Order and in the name of the Governor of Karnataka,

**Shivashankar Naik. L.**

Desk Officer (Technical Cell)(I/c)

Commerce & Industries Department

PR. 52

### ತೋಟಗಾರಿಕೆ ಸಚಿವಾಲಯ

**ವಿಷಯ :** ರಾಜ್ಯದಲ್ಲಿ ದ್ರಾಕ್ಷಾರಸ ಬೆಳೆಯಲು ಸೂಕ್ತ ಪ್ರದೇಶಗಳನ್ನು ಗುರುತಿಸುವುದು.

**ಓದಲಾಗಿದೆ :** 1. ಕೃತೋಇ 513 ತೋಇವಿ 2005 ದಿನಾಂಕ : 14–03–2007.

2. ಕೃತೋಇ 353 ತೋಇವಿ 2008 ದಿನಾಂಕ : 04–01–2010.

**ಪ್ರಸ್ತಾವನೆ :**

ಕರ್ನಾಟಕ ರಾಜ್ಯದ ರೈತರ ಹಿತದೃಷ್ಟಿಯಿಂದ ದ್ರಾಕ್ಷಾರಸ ಉತ್ಪಾದನೆ ಮತ್ತು ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಸೂಕ್ತ ಪ್ರೋತ್ಸಾಹ ನೀಡಲು ಸರ್ಕಾರವು ಕರ್ನಾಟಕ ದ್ರಾಕ್ಷಿ ಸಂರಕ್ಷಣೆ ಮತ್ತು ದ್ರಾಕ್ಷಾರಸ (ವೈನ್) ನೀತಿ – 2007ನ್ನು ಉಲ್ಲೇಖಿತ (1) ರ ಆದೇಶದಲ್ಲಿ ಜಾರಿಗೆ ತಂದಿರುತ್ತದೆ. ಸದರಿ ಆದೇಶದಲ್ಲಿ ದ್ರಾಕ್ಷಾರಸ ತಳಿಗಳನ್ನು ಬೆಳೆಯಲು ಸೂಕ್ತವಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು "ನಂದಿ ವ್ಯಾಲಿ" ಎಂದು ಮತ್ತು ಬಿಜಾಪುರ, ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು "ಕೃಷ್ಣ ವ್ಯಾಲಿ" ಎಂದು ಘೋಷಿಸಲಾಗಿರುತ್ತದೆ.

ತದನಂತರ ಹೊರಡಿಸಲಾದ ಉಲ್ಲೇಖ (2) ರ ಆದೇಶದಲ್ಲಿ "ನಂದಿ ವ್ಯಾಲಿ" ವ್ಯಾಪ್ತಿಯಡಿ ರಾಮನಗರ ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳನ್ನು ಹಾಗೂ "ಕೃಷ್ಣಾವ್ಯಾಲಿ" ವ್ಯಾಪ್ತಿಯಡಿ ಗುಲ್ಬರ್ಗಾ, ರಾಯಚೂರು, ಗದಗ್, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಸೇರ್ಪಡಿಸಲಾಗಿರುತ್ತದೆ.

ಮೇಲ್ಕಂಡ 'ನಂದಿ ವ್ಯಾಲಿ' 'ಕೃಷ್ಣವ್ಯಾಲಿ' ಪ್ರಾಂತ್ಯಗಳ ರೀತಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳು ಉತ್ತಮ ಮಣ್ಣು ಮತ್ತು ಹವಾಗುಣ ಹೊಂದಿರುವುದರಿಂದ ವೈನ್ ತಳಿ ದ್ರಾಕ್ಷಿ ಬೆಳೆಯಲು/ಘಟಕ ಸ್ಥಾಪಿಸಲು ಸೂಕ್ತ ಪ್ರದೇಶವಾಗಿದೆ. ರೆಡ್ ವೈನ್ ಮತ್ತು ವೈಟ್ ವೈನ್ ತಳಿಗಳನ್ನು ಬೆಳೆಯಲು ಸದರಿ ಜಿಲ್ಲೆಗಳು ಪೂರಕ ವಾತಾವರಣ ಹೊಂದಿರುವುದನ್ನು ಗಮನಿಸಲಾಗಿದೆ.

ರೈತರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಈಗಿರುವ 'ನಂದಿ' 'ಕೃಷ್ಣಾ' ವ್ಯಾಲಿಗಳ ಜೊತೆಗೆ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು "ಕಾವೇರಿ ವ್ಯಾಲಿ" ಎಂದು ಘೋಷಿಸುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿದೆ. ಸದರಿ ಕ್ರಮದಿಂದ ಈ ಪ್ರದೇಶದ ಭೌಗೋಳಿಕ ವಿಶಿಷ್ಟತೆಗೆ ಮಾನ್ಯತೆ ದೊರೆತು ಪ್ರದೇಶದ ಉತ್ಪನ್ನಗಳು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಶೇಷವಾಗಿ ಗುರುತಿಸಲ್ಪಡುತ್ತದೆ. ಹೀಗಾಗಿ ರಫ್ತಿಗೆ ವಿಫಲವಾದ ಅವಕಾಶಗಳು ದೊರೆತು ರೈತರು ಹಾಗೂ ಉದ್ಯಮಿಗಳಿಗೆ ಕೆಳಕಂಡಂತೆ ಪ್ರಯೋಜನವಿರುತ್ತದೆ :

**ಪ್ರಸ್ತಾಪಿತ ಕಾವೇರಿ ಪ್ರಾಂತ್ಯದ ರೈತರಿಗೆ ಆಗುವ ಲಾಭಗಳು :**

- ದ್ರಾಕ್ಷಿ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತದೆ.
- ಒಪ್ಪಂದ ಕೃಷಿಯ ಮೂಲಕ ರೈತರು ಉತ್ತಮ ಮತ್ತು ನಿಶ್ಚಿತ ಆದಾಯವನ್ನು ಪಡೆಯಲು ಸಾಧ್ಯವಾಗುತ್ತದೆ.
- ಉದ್ಯಮಿಗಳು ದ್ರಾಕ್ಷಿ ಬೆಳೆ ಬೆಳೆಯಲು ಎಲ್ಲಾ ತಾಂತ್ರಿಕ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ.
- ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.
- ಗುಚ್ಚ ಗ್ರಾಮಗಳಲ್ಲಿ ಅನುಷ್ಠಾನಗೊಳಿಸುವುದರಿಂದ ಎಲ್ಲಾ ಸವಲತ್ತುಗಳನ್ನು ಮತ್ತು ತಾಂತ್ರಿಕ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ.

**ಹೊಸದಾಗಿ ಪ್ರಾರಂಭಿಸುವ ಉದ್ಯಮಿಗಳಿಗೆ ಆಗುವ ಲಾಭಗಳು :**

- ದ್ರಾಕ್ಷಾರಸ ಘಟಕಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ.
- ಉದ್ಯಮಿಗಳ ಪ್ರದೇಶಗಳನ್ನು ಗುರುತಿಸಲು ಆಗುತ್ತಿದ್ದ ತೊಂದರೆ ಮತ್ತು ಪ್ರದೇಶಗಳನ್ನು ಗುರುತಿಸಲು ಬೇಕಾದ ಸಮಯ ಉಳಿತಾಯವಾಗುತ್ತದೆ.
- ದ್ರಾಕ್ಷಾರಸ ಘಟಕಕ್ಕೆ ಬೇಕಾದ ಕಚ್ಚಾವಸ್ತುಗಳು ಲಭ್ಯವಾಗುತ್ತದೆ.
- ತಾಂತ್ರಿಕ ಮಾಹಿತಿ ನೀಡಲು ಸಾಧ್ಯವಾಗುತ್ತದೆ.
- ದ್ರಾಕ್ಷಿ ಬೆಳೆಯನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತದೆ.
- ದ್ರಾಕ್ಷಿಯು ಹಾಳಾಗದಂತೆ ಸಂಸ್ಕರಣೆ ಮಾಡಲು ಸಾಧ್ಯವಾಗುತ್ತದೆ.
- ರಾಜ್ಯಕ್ಕೆ ಹೆಚ್ಚಿನ ಬಂಡವಾಳವನ್ನು ಪಡೆಯಲು ಸಾಧ್ಯವಾಗುತ್ತದೆ.

ದಿನಾಂಕ : 11-02-2011 ರಂದು ನಡೆದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಸಭೆಯಲ್ಲಿ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು "ಕಾವೇರಿ ವ್ಯಾಲಿ" ಎಂದು ಕರ್ನಾಟಕ ದ್ರಾಕ್ಷಿ ಸಂರಕ್ಷಣೆ ಮತ್ತು ದ್ರಾಕ್ಷರಸ ನೀತಿ, 2007ರಡಿಯಲ್ಲಿ ಘೋಷಿಸಲು ತೀರ್ಮಾನಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ತೋಇ 208 ತೋಇವಿ 2011, ಬೆಂಗಳೂರು, ದಿನಾಂಕ: 30 ನೇ ನವೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನಲೆಯಲ್ಲಿ ಕರ್ನಾಟಕ ದ್ರಾಕ್ಷಿ ಸಂಸ್ಕರಣೆ ಮತ್ತು ದ್ರಾಕ್ಷಾರಸ (ವೈನ್) ನೀತಿ – 2007 ರಲ್ಲಿನ ಧ್ಯೇಯ ಧೋರಣೆಗಳ ಅನುಷ್ಠಾನ ಸಂಬಂಧ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡ ಪ್ರದೇಶ/ಪ್ರಾಂತ್ಯವನ್ನು "ಕಾವೇರಿ ವ್ಯಾಲಿ" ಎಂದು ಈ ಮೂಲಕ ಘೋಷಿಸಲಾಗಿದೆ. ಉಲ್ಲೇಖ (1) ರ ಆದೇಶದಲ್ಲಿ ಸಾದರ ಪಡಿಸಲಾಗಿರುವ ವೈನ್ ನೀತಿಯ ಅಂಶಗಳು ಹಾಗೂ ಈ ಕುರಿತಂತೆ ಆಗಿಂದಾಗ್ಗೆ ಹೊರಡಿಸಲಾಗುವ ಆದೇಶಗಳು/ನಿರ್ದೇಶನಗಳನ್ನು 'ಕಾವೇರಿ ವ್ಯಾಲಿ' ವೈನ್ ಪ್ರಾಂತ್ಯಕ್ಕೆ ಸಹ ಅನ್ವಯಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.53

ಬಿ. ಸಿ. ಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

## ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

**ವಿಷಯ :** ನಿರ್ದಿಷ್ಟ ಗುರಿಯ ಸಾರ್ವಜನಿಕ ವಿತರಣಾ ಪದ್ಧತಿಯಡಿ ಕಾರ್ಯನಿರ್ವಹಿಸುತ್ತಿರುವ ಪಡಿತರ ವಸ್ತುಗಳ ಚಿಲ್ಲರೆ ಮಾರಾಟಗಾರರಿಗೆ ನೀಡಲಾಗುತ್ತಿರುವ ಲಾಭಾಂಶ ದರಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ : ಆನಾಸ 373 ಡಿಆರ್ಎ 05, ದಿನಾಂಕ : 27-08-2008.

2. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಪತ್ರ ಸಂಖ್ಯೆ : ಸಿಎಫ್ಎಸ್ : ಡಿಡಿ : III : 165/2005-06, ದಿನಾಂಕ : 08-02-2011.

**ಪ್ರಸ್ತಾವನೆ :**

ಮೇಲೆ ಉಲ್ಲೇಖ (1) ರಲ್ಲಿ ಓದಲಾದ ಸರ್ಕಾದ ಆದೇಶದಲ್ಲಿ ಪಡಿತರ ವಸ್ತುಗಳ ಚಿಲ್ಲರೆ ಮಾರಾಟಗಾರರಿಗೆ ಲಾಭಾಂಶವನ್ನು ಪ್ರತಿ ಕ್ವಿಂಟಾಲ್ ಅಕ್ಕಿಗೆ ರೂ. 29/- ರಂತೆ ಹಾಗೂ ಪ್ರತಿ ಕ್ವಿಂಟಾಲ್ ಗೋಧಿಗೆ ರೂ. 23/- ರಂತೆ ನಿಗಧಿಪಡಿಸಲಾಗಿರುತ್ತದೆ.

ಮೇಲೆ ಉಲ್ಲೇಖ (2) ರಲ್ಲಿ ಓದಲಾದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರ ಪತ್ರದಲ್ಲಿ ನ್ಯಾಯ ಬೆಲೆ ಅಂಗಡಿಗಳ ಮಾಲೀಕರು ಪ್ರತಿ ಕ್ವಿಂಟಾಲ್ ಆಹಾರಧಾನ್ಯದ ಎತ್ತುವಳಿ, ವಿತರಣೆಗೆ ಖರ್ಚು ಮಾಡುತ್ತಿರುವ ಬಂಡವಾಳದ ಮೇಲಿನ ಬಡ್ಡಿ,

ಡಿ.ಡಿ. ಕಮೀಷನ್, ತೂಕಮಾಡುವವರ ಸಂಬಳ, ನ್ಯಾಯ ಬೆಲೆ ಅಂಗಡಿಗಳ ಬಾಡಿಗೆ ವೆಚ್ಚ, ವಿದ್ಯುಚ್ಛಕ್ತಿ ವೆಚ್ಚ, ಲೇಖನ ಸಾಮಗ್ರಿಗಳ ವೆಚ್ಚ, ಪ್ರಯಾಣ ವೆಚ್ಚ ಇತ್ಯಾದಿಗಳನ್ನು ಲೆಕ್ಕಹಾಕಿ ಪ್ರಸ್ತುತ ಚಿಲ್ಲರೆ ಮಾರಾಟಗಾರರಿಗೆ ನೀಡಲಾಗುತ್ತಿರುವ ಲಾಭಾಂಶಗಳನ್ನು ಹೆಚ್ಚಿಸುವಂತೆ ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆನಾಸ 67 ಡಿಆರ್‌ಎ 2011, ಬೆಂಗಳೂರು, ದಿನಾಂಕ : 9 ನೇ ನವೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಿರ್ದಿಷ್ಟ ಗುರಿಯ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಟ್ಟಣ/ನಗರ/ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸುವ ಚಿಲ್ಲರೆ ವರ್ತಕರಿಗೆ ಪ್ರತಿ ಕ್ವಿಂಟಾಲ್ ಗೋಧಿಯ ಚಿಲ್ಲರೆ ಲಾಭಾಂಶವನ್ನು ರೂ. 23/- ರಿಂದ ರೂ. 25/- ಕ್ಕೆ ಹೆಚ್ಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು 2001-12 ನೆ ಸಾಲಿನ ಲೆಕ್ಕ ಶೀರ್ಷಿಕೆ "2408-01-102-0-01" ರಡಿಯಲ್ಲಿ ಭರಿಸತಕ್ಕದ್ದು. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 930-5/2011, ದಿನಾಂಕ : 29-11-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ
(ಆಹಾರ - 1 ಮತ್ತು 2)

ಪಿ.ಆರ್.54

## ಕೃಷಿ ಸಚಿವಾಲಯ

### ತಿದ್ದುಪಡಿ

ಸಂಖ್ಯೆ : ಕೃಇ/110/ಎಎಇ/2011 ಬೆಂಗಳೂರು, ದಿನಾಂಕ 25 ನೇ ನವೆಂಬರ್ 2011.

ವಿಷಯ : ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು 2011 ರ ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲು ಘಟಕವಾರು ಬೆಳೆಗಳ ಘೋಷಣೆ ಬಗ್ಗೆ - ಆದೇಶಗಳು.

ಉಲ್ಲೇಖ : ಸಮಸಂಖ್ಯೆಯ ಸರ್ಕಾರದ ಆದೇಶದ ದಿನಾಂಕ : 26-05-2011.

ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು 2011ರ ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲು ಘಟಕವಾರು ಬೆಳೆಗಳ ಘೋಷಣೆ ಬಗ್ಗೆ ಉಲ್ಲೇಖಿತ ಆದೇಶದಲ್ಲಿನ ಪುಟ ಸಂಖ್ಯೆ 37 ಮತ್ತು 38 ರಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯತಿಗಳ ಹೆಸರುಗಳು ತಪ್ಪಾಗಿ ನಮೂದಿತವಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು.

| ಪುಟ ಸಂಖ್ಯೆ | ಗ್ರಾಮ ಪಂಚಾಯತಿ ಕ್ರಮ ಸಂಖ್ಯೆ | ಗ್ರಾಮ ಪಂಚಾಯತಿ ಹೆಸರು ಸರ್ಕಾರದ ಆದೇಶದಲ್ಲಿ ನಮೂದಾಗಿರುವುದು | ಗ್ರಾಮ ಪಂಚಾಯತಿ ಹೆಸರು ಸರ್ಕಾರದ ಆದೇಶದಲ್ಲಿ ಓದಿಕೊಳ್ಳತಕ್ಕದ್ದು |
|---|---|---|---|
| 37 | 605 | ಭೂಪನಹಳ್ಳಿ | ಭೂವನಹಳ್ಳಿ |
| 38 | 625 | ದೊಡ್ಡಹುಲಿಕುಂಟೆ | ಹುಲಿಕುಂಟೆ |
| 38 | 631 | ಹುಲಿಕುಂಟೆ | ಹಂದಿಕುಂಟೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪರಂಧಾಮಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ

ಪಿ.ಆರ್.55

## ಸಹಕಾರ ಸಚಿವಾಲಯ

ವಿಷಯ : 2004-05 ನೇ ಸಾಲಿನಿಂದ 2010-11 ರ ವರೆಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಹಾಗೂ ನೇಕಾರರಿಗೆ ಮೀನುಗಾರರಿಗೆ ನೀಡಿದ ಬಡ್ಡಿ ಸಹಾಯಧನ ಕ್ಲೇಮುಗಳಿಗೆ ಸಂಬಂಧಿಸಿದಂತೆ ಅಂತಿಮ ಗಡುವು ವಿಸ್ತರಿಸುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಒ 129 ಸಿಎಲ್ ಎಸ್ 2011, ದಿನಾಂಕ : 01-07-2011.
2. ಸರ್ಕಾರಿ ಆದೇಶ ಸಂಖ್ಯೆ : ಸಿಒ 129 ಸಿಎಲ್ ಎಸ್ 2011, ದಿನಾಂಕ : 02-11-2011.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ : ಸಿಆರ್‌ಡಿ/ಸಿಎಬಿ-1/19/2011-12, ದಿನಾಂಕ : 20-10-2011.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ 2004-05 ನೇ ಸಾಲಿನಿಂದ 2010-11 ನೇ ಸಾಲಿನವರೆಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳಿಗೆ ನೇಕಾರಿಕೆ ಮತ್ತು ಮೀನುಗಾರಿಕೆ ಸಾಲಗಳಿಗೆ ಬಡ್ಡಿ ಸಹಾಯಧನದ ಸೌಲಭ್ಯವನ್ನು ಪಡೆಯಲು ದಿನಾಂಕ : 30-09-2011 ರ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಮೇಲೆ ಓದಲಾದ (2) ರ ಆದೇಶದಲ್ಲಿ ಸದರಿ ಅವಧಿಯನ್ನು ದಿನಾಂಕ : 30-11-2011 ರವರೆಗೆ ವಿಸ್ತರಿಸಲಾಗಿತ್ತು. ಮಾನ್ಯ ಸಹಕಾರ ಸಚಿವರು ಸರ್ಕಾರದ ಹಲವು ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳನ್ನಾಗಿ

ಘೋಷಿಸಿದ ಹಿನ್ನೆಲೆಯಲ್ಲಿ ಹಾಗೂ ಸುಸ್ತಿ ಸಾಲಗಳನ್ನು ಮರುಪಾವತಿಸಲು ತಿಳಿಸಿರುವುದರಿಂದ 31 ನೇ ಡಿಸೆಂಬರ್ 2011ರವರೆಗೆ ವಿಸ್ತರಿಸಲು ಮೇಲೆ ಓದಲಾದ (3)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ.

ಆದುದರಿಂದ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಒ 129 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ : 9 ನೇ ಡಿಸೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು 2004-05ನೇ ಸಾಲಿನಿಂದ 2010-11ನೇ ಸಾಲಿನವರೆಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳಿಗೆ, ನೇಕಾರಿಕೆ ಮತ್ತು ಮೀನುಗಾರಿಕೆ ಸಾಲಗಳಿಗೆ ಬಡ್ಡಿ ಸಹಾಯಧನದ ಸೌಲಭ್ಯವನ್ನು ಪಡೆಯಲು ಅಂತಿಮ ದಿನಾಂಕವನ್ನು 31-12-2011ರವರೆಗೆ ನಿಗದಿಗೊಳಿಸಿ ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್.56

## ಸಹಕಾರ ಸಚಿವಾಲಯ

ವಿಷಯ : ಮುತ್ತೂಟ್ ಮಿನಿ ಫೈನಾನ್ಸಿಯರ್ಸ್ ಪ್ರೈ. ಲಿ., ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಲೇವಾದೇವಿ ಅಧಿನಿಯಮ 1961 ರಿಂದ ವಿನಾಯಿತಿ ನೀಡುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರು ಹಾಗೂ ಲೇವಾದೇವಿ ಮಹಾನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಎನ್ಎಂಎನ್/ವೈಎಂಸಿ/89ಬಿ/2010-11, ದಿನಾಂಕ 21-10-2011

**ಪ್ರಸ್ತಾವನೆ :**

ಮುತ್ತೂಟ್ ಮಿನಿಫೈನಾನ್ಸಿಯರ್ಸ್ ಪ್ರೈ. ಲಿ., ಈ ಸಂಸ್ಥೆಯು ರಿಜಿಸ್ಟ್ರಾರ್ ಆಫ್ ಕಂಪನೀಸ್, ಕೇರಳ ಇವರಿಂದ (ಸಂಖ್ಯೆ: 09-12154/1998 ಪ್ರಕಾರ) ನೋಂದಣಿಯಾಗಿದ್ದು, ಆರ್‌ಬಿಐನ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವಿಭಾಗ ಪ್ರಾಂತೀಯ ಕಛೇರಿ ತಿರುವನಂತಪುರಂ. ಇವರಿಂದ (ಸಂಖ್ಯೆ: N-16.00175, ದಿನಾಂಕ 23-07-2002 ಪ್ರಕಾರ) ಎನ್‌ಬಿ ಎಫ್‌ಸಿ ಸಂಸ್ಥೆ ಎಂದು ಪ್ರಮಾಣ ಪತ್ರ ಪಡೆದಿದ್ದು, ಕರ್ನಾಟಕದಲ್ಲಿಯೂ ಸಹ ಹಣಕಾಸಿನ ವ್ಯವಹಾರಗಳನ್ನು ನಡೆಸುತ್ತಿದ್ದು ತನ್ನ ಎಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ರೂ. 60,000/- ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಪಾವತಿಸಿರುತ್ತದೆ. ಈಗ ಸದರಿ ಸಂಸ್ಥೆಯು ಕರ್ನಾಟಕ ಲೇವಾದೇವಿ ಅಧಿನಿಯಮ 1961 ರಿಂದ ವಿನಾಯಿತಿ ನೀಡಲು ಸರ್ಕಾರಕ್ಕೆ ದಿನಾಂಕ 19-07-2010 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಮನವಿಯನ್ನು ಸಹಕಾರ ಸಂಘಗಳ ನಿಬಂಧಕರು ಪರಿಶೀಲಿಸಿ ವರದಿ ನೀಡಿರುತ್ತಾರೆ. ಈ ವರದಿಯ ಮೇರೆಗೆ ಭಾರಿತೀಯ ರಿಸರ್ವ್ ಬ್ಯಾಂಕ್ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961 ತಿದ್ದುಪಡಿ ತರಲು ಉದ್ದೇಶಿಸಿದ್ದು, ಇದರ ಮೇರೆಗೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಂದ ಲೇವಾದೇವಿ ಅಧಿನಿಯಮದಿಂದ ಹೊರಗಿಡಲು ಪ್ರಸ್ತಾಪಿಸಲಾಗಿದೆ ಹಾಗೂ ಸದರಿ ಸಮಸ್ಥೆಯು ಸಾರ್ವಜನಿಕರಿಂದ ಕರ್ನಾಟಕ ಲೇವಾದೇವಿ ಅಧಿನಿಯಮದಲ್ಲಿ ನಿಗದಿಪಡಿಸಿರುವ ಬಡ್ಡಿದರಕ್ಕಿಂತ ಹೆಚ್ಚಿನ ಬಡ್ಡಿ ಪಡೆಯುತ್ತಿದ್ದಲ್ಲಿ ಕರ್ನಾಟಕ ಮಿತಿಮೀರಿದ ಬಡ್ಡಿವಿಧಿಸುವಿಕೆಯ ನಿಷೇಧ ಅಧಿನಿಯಮ 2004ರಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿದ್ದು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಅವಕಾಶವಿರುವುದರಿಂದ ಮುತ್ತೂಟ್ ಮಿನಿಫೈನಾನ್ಸಿಯರ್ಸ್ ಪ್ರೈ.ಲಿ., ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961ರ ಪ್ರಕರಣ 2(10)(iv)(ಬಿ) ರಡಿಯಲ್ಲಿ ವಿನಾಯಿತಿ ನೀಡಬಹುದೆಂದು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಮುಂದುವರೆದು, ಸದರಿ ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಪ್ರಕರಣ 45IA ರಡಿಯಲ್ಲಿ ನೋಂದಣಿಯಾಗಿರುವುದರಿಂದ ಅದರ ವ್ಯವಹಾರಗಳು ಆರ್‌ಬಿಐ ನಿಂದ ನಿಯಂತ್ರಣಕ್ಕೊಳಪಡುತ್ತವೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಒ 22 ಸಿಎಂಎಲ್ 2011, ಬೆಂಗಳೂರು, ದಿನಾಂಕ : 23-11-2011.**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಲೇವಾದೇವಿ ಅಧಿನಿಯಮ 1961ರ ಪ್ರಕರಣ (2)ರ ಖಂಡ 10ರ ಉಪಖಂಡ (iv)ರ ಐಟಂ (ಬಿ) ಅಡಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮುತ್ತೂಟ್ ಮಿನಿ ಫೈನಾನ್ಸಿಯರ್ಸ್ ಪ್ರೈ. ಲಿ., ಈ ಸಂಸ್ಥೆಯು ಸದರಿ ಐಟಂನ ಉಪಬಂಧದಿಂದ ಮುಂದಿನ ಆದೇಶದವರೆಗೆ ಈ ಕೆಳಗಿನ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಲಾಗಿದೆ.

1. ಸಾರ್ವಜನಿಕರಿಂದ/ಗ್ರಾಹಕರಿಂದ ಗಂಭೀರ ದೂರು ದಾಖಲಾಗಿ ಅಧಿಕ ಬಡ್ಡಿ ಪಡೆಯುತ್ತಿರುವುದು ಕಂಡುಬಂದಲ್ಲಿ ನೀಡಲಾದ ವಿನಾಯಿತಿಯನ್ನು ವಾಪಸ್ಸು ಪಡೆಯಲಾಗುವುದು.
2. ಕರ್ನಾಟಕ ಮಿತಿಮೀರಿದ ಬಡ್ಡಿವಿಧಿಸುವಿಕೆಯ ನಿಷೇಧ ಅಧಿನಿಯಮ 2004 ಅನ್ನು ಅನುಸರಿಸುವುದು
3. ದಿನಾಂಕ 31-3-2011ರ ಅಂತ್ಯಕ್ಕೆ ಸರ್ಕಾರಕ್ಕೆ ಪಾವತಿಸಿರುವ ಭದ್ರತಾ ಠೇವಣಿ ರೂ. 60,000/- ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ.ಆರ್. 57

## ಸಹಕಾರ ಸಚಿವಾಲಯ

### ತಿದ್ದುಪಡಿ ಆದೇಶ

ಸಂಖ್ಯೆ: ಸಿಒ 96 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ 25-11-2011

ಸರ್ಕಾರಿ ಆದೇಶದ ಸಂಖ್ಯೆ: ಸಿಒ 96 ಸಿಎಲ್ಎಸ್ 2011, ಬೆಂಗಳೂರು, ದಿನಾಂಕ 19-10-2011ರ ಆದೇಶದ ಕಂಡಿಕೆ 2ರ ನಂತರ ಈ ಕೆಳಕಂಡ ಪದಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

"ಬಿಡುಗಡೆ ಮಾಡಲಾದ ಮೊತ್ತವನ್ನು ಖಜಾನೆಯಿಂದ ಡ್ರಾ ಮಾಡಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಠೇವಣಿಸತಕ್ಕದ್ದು. ತದನಂತರ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರು ಸದರಿ ಹಣವನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಬಿಡುಗಡೆ ಮಾಡತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ.ಆರ್. 58

## ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

**ವಿಷಯ :** ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಾಮಗ್ರಿ ಖರೀದಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ: ಮೂಅಇ 05 ಯುಐಪಿ 2006 (ಪಿ), ದಿನಾಂಕ: 18-06-2007
2. ಸರ್ಕಾರದ ಆದೇಶ ಸಂಖ್ಯೆ: ಮೂಅಇ 77 ಮೂಇವಿ 2007, ದಿನಾಂಕ: 25-10-2007
3. ಸರ್ಕಾರದ ಆದೇಶ ಸಂಖ್ಯೆ: ಮೂಅಇ 80 ಮೂತಾಂವಿ 2008, ದಿನಾಂಕ: 23-10-2008
4. ಸರ್ಕಾರದ ಆದೇಶ ಸಂಖ್ಯೆ: ಮೂಅಇ 87 ಮೂಇವಿ 2009, ದಿನಾಂಕ: 26-08-2009
5. ಸರ್ಕಾರದ ಆದೇಶ ಸಂಖ್ಯೆ: ಮೂಅಇ 72 ಮೂಇವಿ 2010, ದಿನಾಂಕ: 18-08-2010
6. ಸಿ.ಎಫ್.ಒ ಹಾಗೂ ಕಂಪನಿ ಸೆಕ್ರೆಟರಿ, ಐಡೆಕ್‌ರವರ ಪತ್ರ ಸಂ. ಐಡೆಕ್/2011-12/1062, ದಿನಾಂಕ 31-10-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂಖ್ಯೆ (1)ರ ಆದೇಶದಲ್ಲಿ ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ನಿರ್ದೇಶಕರು ಹಾಗೂ ತಜ್ಞರನ್ನು ಒಳಗೊಂಡಂತೆ ಪಿಪಿಪಿ ಕೋಶವನ್ನು ರಚಿಸಲು ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಹೊಸ ಮೂಲಸೌಲಭ್ಯ ಅಭಿವೃದ್ಧಿ ನೀತಿ 2007ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪಿಪಿಪಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಯ ಅಧಿಕಾರಿಗಳಿಗೆ/ಏಜೆನ್ಸಿಗಳಿಗೆ ತರಬೇತಿ ನೀಡುವುದಕ್ಕೆ ರೂ. 5.00 ಲಕ್ಷಗಳನ್ನು ಹಾಗೂ ಮಾಹಿತಿ ಮತ್ತು ದಾಖಲೆ ಕೇಂದ್ರಕ್ಕಾಗಿ (Information & Documentation Centre) ರೂ. 5.00 ಲಕ್ಷಗಳು ಒಟ್ಟು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ನೀತಿ 2007 ರಂತೆ ಸಾಮರ್ಥ್ಯ ಅಭಿವೃದ್ಧಿ ಬಗ್ಗೆ ತರಬೇತಿ ಕಾರ್ಯಕ್ರಮಗಳ ಸಮರ್ಪಕ ನಿರ್ವಹಣೆ ಹಾಗೂ ಈ ಇಲಾಖೆಯಲ್ಲಿ ಮಾಹಿತಿ ಮತ್ತು ದಾಖಲೆ ಕೇಂದ್ರ ಸ್ಥಾಪನೆ, ಉನ್ನತೀಕರಣ ಮತ್ತು ಲಾಜಿಸ್ಟಿಕ್‌ಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಐಡೆಕ್ ಮುಖಾಂತರ ಖರೀದಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4)ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಾಮಗ್ರಿಗಳಾದ ಜೆರಾಕ್ಸ್ ಯಂತ್ರ, ಸ್ಟೇಷನರಿ ಸಾಮಗ್ರಿ, ಲ್ಯಾಪ್‌ಟಾಪ್/ಡೆಸ್ಕ್‌ಟಾಪ್ ಕಂಪ್ಯೂಟರ್ ಫೆರಿಫರಲ್ಸ್ ಇತ್ಯಾದಿ ಖರೀದಿ ಮಾಡಲು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5)ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಪಿಪಿಪಿ ಕೋಶದ ತರಬೇತಿ, capacity building ಮಾಹಿತಿ ಡಾಕ್ಯುಮೆಂಟೇಷನ್ ಸೆಂಟರ್ ಹಾಗೂ 2010-11ನೇ ಸಾಲಿನ ವೆಚ್ಚಗಳಿಗಾಗಿ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (6)ರ ಪತ್ರದಲ್ಲಿ ಸಿಎಫ್ಒ ಮತ್ತು ಕಂಪನಿ ಕಾರ್ಯದರ್ಶಿ ಐಡೆಕ್ ಇವರು ವರದಿ ಮಾಡಿ, ಸರ್ಕಾರವು ಸಂಸ್ಥೆಗೆ ಬಿಡುಗಡೆ ಮಾಡಿದ ಅನುದಾನವನ್ನು ಪಿಪಿಪಿ ಕೋಶದ ತರಬೇತಿ, capacity building ಮಾಹಿತಿ ಡಾಕ್ಯುಮೆಂಟೇಷನ್ ಸೆಂಟರ್ ಇವುಗಳಿಗೆ ವೆಚ್ಚವಾಗಿದ್ದು 2011-12ನೇ ಸಾಲಿಗೆ ಅಗತ್ಯ ಸಾಮಗ್ರಿಗಳಾದ ಜರಾಕ್ಸ್ ಯಂತ್ರ, ಸ್ಟೇಷನರಿ ಸಾಮಗ್ರಿ, ಲ್ಯಾಪ್‌ಟಾಪ್/ಡೆಸ್ಕ್‌ಟಾಪ್ ಕಂಪ್ಯೂಟರ್ ಫೆರಿಫರಲ್ಸ್ ಮತ್ತು ಟಾಟಾ ಡೆಕೊಮೊ ಕಾರ್ಡ್ ಇತ್ಯಾದಿ ಖರೀದಿ ಮಾಡಲು ಸರ್ಕಾರವು ಹೆಚ್ಚುವರಿಯಾಗಿ ರೂ. 30.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಮೂಅಇ 80 ಮೂತಾಂವಿ 2008, ಬೆಂಗಳೂರು, ದಿನಾಂಕ : 12-12-2011.**

ಪ್ರಸ್ತಾವನೆಯಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಭೆಗಳು ಹಾಗೂ ಇತರೆ ಖರ್ಚುಗಳಿಗಾಗಿ ರೂ. 30.00 ಲಕ್ಷಗಳ ಅನುದಾನವನ್ನು (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ಐಡೆಕ್ ಸಂಸ್ಥೆಗೆ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ 3451-00-090-1-06-125 Infrastructure Preliminary Studies and modernisation ಇದರಡಿ 2011-12ನೇ ಅನುದಾನದಿಂದ ಭರಿಸತಕ್ಕದ್ದು.

ಸದರಿ ಮೊತ್ತವನ್ನು ಚೀಫ್ ಫೈನಾನ್ಷಿಯಲ್ ಆಫೀಸರ್ ಮತ್ತು ಕಂಪನಿ ಕಾರ್ಯದರ್ಶಿ, ಐಡೆಕ್ ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ ಹಾಗೂ ಖರ್ಚು ಮಾಡಿದ ಪ್ರತಿಯೊಂದು ಬಾಬ್ತು ಹಣಕ್ಕೆ ಅಗತ್ಯ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 16-05-2008ರ ಆದೇಶ ಸಂಖ್ಯೆ: FD 1 TFP 2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಶಿವಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 59 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

## ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ :
1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್ ವಿ(ಜಿ)/ಸಿಟಿ/ಕ್ರೈಂ.1/2011, ದಿನಾಂಕ 17/24-02-2011.
2) ತನಿಖಾಧಿಕಾರಿಯ ವರದಿ ದಿನಾಂಕ 18-02-2011
3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
4) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್ ವಿ(ಜಿ)/ಸಿಟಿ/ಕ್ರೈಂ1/2011, ದಿನಾಂಕ 22-11-2011.

ಪ್ರಸ್ತಾವನೆ :

ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು ಇವರ ವಿರುದ್ಧ ಗುನ್ನೆ ಸಂಖ್ಯೆ: 1/2011ರಲ್ಲಿ ಆರಕ್ಷಕ ನಿರೀಕ್ಷಕರು ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು (ಉಲ್ಲೇಖ-2 & 3) ಮಾನ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ 17/24-02-2011ರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ.1/2011 ಇದರೊಡನೆ ಕಳುಹಿಸುತ್ತಾ, ಆಪಾದಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ-1988ರ 19(1)(ಬಿ) ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಉಲ್ಲೇಖಿತ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ.1/2011, ಬೆಂಗಳೂರು ದಿನಾಂಕ 17/24-02-2011ರ ಮೂಲಕ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಬಿ. ಎನ್. ರೇವಣ್ಣಗೌಡ, ಪ್ರಾಂಶುಪಾಲರು, ಪುಷ್ಪರವಿ ನ್ಯಾಷನಲ್ ಐ.ಟಿ.ಐ. ಗಂಡಸಿ ಹ್ಯಾಂಡ್ ಪೋಸ್ಟ್ ಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರ ಫಿರ್ಯಾದಿ ದಿನಾಂಕ 03-01-2011.
2. ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 1/2011.
3. ಪ್ರಾಯೋಗಿಕ ಪಂಚನಾಮೆ ದಿನಾಂಕ 03-01-2011
4. ಟ್ರ್ಯಾಪ್‌ನ ಮಹಜರ್ ದಿನಾಂಕ 04-01-2011
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಸಾ.ಅ.ಸಂ./ರಾಪ/ಲೋಕ್/177/10-11, ದಿನಾಂಕ 13-01-2011.
6. ಕೃತ್ಯ ನಡೆದ ಸ್ಥಳದ ನಕಾಶೆ: ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ವೃತ್ತ, ಬೆಂಗಳೂರು.
7. ಈ ಕೆಳಗಿನ ಸಾಕ್ಷಿಗಳ ಹೇಳಿಕೆಗಳು:-
    1. ಶ್ರೀ ಬಿ. ಎನ್. ರೇವಣ್ಣಗೌಡ, ಪ್ರಾಂಶುಪಾಲರು, ಪುಷ್ಪರವಿ ನ್ಯಾಷನಲ್ ಐ.ಟಿ.ಐ. ಗಂಡಸಿ ಹ್ಯಾಂಡ್ ಪೋಸ್ಟ್ ಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.
    2. ಶ್ರೀ ಹೆಚ್. ಟಿ. ಗುರುರಾಜು, ಪ್ರಾಂಶುಪಾಲರು, ಪಿ.ಇ.ಎಸ್. ಐ.ಟಿ.ಐ. ಅರಕಲಗೂಡು
    3. ಶ್ರೀ ಅಬ್ದುಲ್ ಖಾದೀರ್ ಷರೀಫ್, ಪ್ರ.ದ.ಸ., ಸಾರಿಗೆ ಆಯುಕ್ತರ ಕಛೇರಿ
    4. ಶ್ರೀ ಕೆ. ಸಿ. ಸುರೇಶ್ ಕುಮಾರ್, ಕಛೇರಿ ಅಧೀಕ್ಷಕರು, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ

5. ಶ್ರೀ ಎಂ. ಈಶ್ವರಪ್ಪ, ತರಬೇತಿ ಅಧಿಕಾರಿ, ಟಿ.ಎಂ.ಎ.ಇ.ಎಸ್. ಐ.ಟಿ.ಐ
6. ಶ್ರೀ ಕೆ. ರಮೇಶ್, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7. ಶ್ರೀ ಬಿ. ಕೆ. ರೂಪೇಶ್ ಕುಮಾರ್, ಹಿ.ಸ. ಬೆ.ವಿ.ಕಂ. ಬೆಂಗಳೂರು
8. ಶ್ರೀ ಎಸ್. ಆರ್. ಉಮಾಶಂಕರ್, ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
9. ಶ್ರೀ ಜಿ. ತಿಮ್ಮಯ್ಯ, ಡಿ-ಗ್ರೂಪ್ ನೌಕರ, ಉದ್ಯೋಗ ಮತ್ತು ತರಬೇತಿ ಇಲಾಖೆ
10. ಶ್ರೀ ಎಂ. ಸಂತೋಷ್, ಡಿ-ಗ್ರೂಪ್ ನೌಕರ, ಉದ್ಯೋಗ ಮತ್ತು ತರಬೇತಿ ಇಲಾಖೆ
11. ಶ್ರೀ ಅನಂತಪದ್ಮನಾಭ, ಯಗಚಿ ಐ.ಟಿ.ಐ. ಕಾಲೇಜ್
12. ಶ್ರೀ ವಿ. ಪಿ. ಈಶ್ವರ್ ನಾಯಕ್, ಜಂಟಿ ನಿರ್ದೇಶಕರು, ಉ ಮತ್ತು ತ ಇಲಾಖೆ
13. ಶ್ರೀ ಕೆ. ಆರ್. ಹಾಲಪ್ಪ ಶೆಟ್ಟಿ, ಉಪ ನಿರ್ದೇಶಕರು, ಉ ಮತ್ತು ತ ಇಲಾಖೆ
14. ಶ್ರೀ ಸಿ. ವಿ. ಚಂದ್ರೇಗೌಡ, ಕಿ.ತ.ಅ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
15. ಶ್ರೀ ಜೆ. ವೈ. ಫಯಾಜ್, ಕಿ.ತ.ಅ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
16. ಶ್ರೀ ಅನಂತಕುಮಾರ್, ಕಿ.ತ.ಅ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
17. ಶ್ರೀ ಬಿ. ಎನ್. ಪಾಲಾಕ್ಷ, ಪ್ರ.ದ.ಸ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
18. ಶ್ರೀ ಎಂ. ಪಿ. ನಟರಾಜ್, ಕಿ.ತ.ಅ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
19. ಶ್ರೀ ಡಿ. ಆರ್. ನಾಗೇಶ್, ಕಿ.ತ.ಅ. ಪುಷ್ಪರವಿ ನ್ಯಾಷನಲ್ ಐ.ಟಿ.ಐ.
20. ಶ್ರೀ ಆನಂದ್, ಕಾರ್ಯಾಗಾರ ಸಹಾಯಕರು, ಪುಷ್ಪರವಿ ನ್ಯಾಷನಲ್ ಐ.ಟಿ.ಐ.
21. ಶ್ರೀ ಎಲ್. ಆರ್. ನಂಜೇಶ್, ಡಿ-ಗ್ರೂಪ್ ನೌಕರರು, ಪುಷ್ಪರವಿ ನ್ಯಾಷನಲ್ ಐ.ಟಿ.ಐ.
22. ಶ್ರೀ ವೇದಮೂರ್ತಿ, ಕಿರಿಯ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.
23. ಡಾ॥ ರವಿಶಂಕರ್ ಕಾಕತ್ಕರ್, ಕರ್ನಾಟಕ ಸರ್ಕಾರದ ರಾಸಾಯನಿಕ ಪರೀಕ್ಷಕರು
24. ಶ್ರೀಮತಿ ನಾಗಶ್ರೀ, ನ್ಯಾಯಾಧೀಶರು, 17ನೇ ಎಸಿಎಂಎಂ ನ್ಯಾಯಾಲಯ, ಬೆಂಗಳೂರು
25. ಶ್ರೀ ದೇಶಿಕ, ಹೆಡ್, ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
26. ಶ್ರೀ ರಾಮಯ್ಯ, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
27. ಶ್ರೀ ಉಮೇಶ್, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
28. ಶ್ರೀ ಧರಣೀಶ, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
29. ಶ್ರೀ ರವಿಕುಮಾರ್, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
30. ಶ್ರೀಮತಿ ಮಮತ, ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ
31. ಶ್ರೀ ಎಸ್. ಟಿ. ಯೋಗೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ
32. ಶ್ರೀ ನಿರಂಜನ್ ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ
33. ಶ್ರೀ ಸುರೇಶ್ ಬಾಬು, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ
34. ಶ್ರೀ ಎಸ್. ಗಿರೀಶ್, ಪೊಲೀಸ್ ಉಪ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ
35. ಶ್ರೀ ಕೆ. ಸಿ. ಲಕ್ಷ್ಮೀನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ

8. ಲಂಚ ಕೇಳಲು ಆಧಾರವಾದ ಈ ಕೆಳಗಿನ ಕಡತ ಅಥವಾ ದಾಖಲೆ:
   1) ಉತಇ/ತ/ಸಂ-2/ವಿವ-52/10.11 (ಪುಷ್ಪರವಿ ನ್ಯಾಷನಲ್ ಐ.ಟಿ.ಐ. ಕಾಲೇಜಿನ 9 ಜನ ಸಿಬ್ಬಂದಿಗಳನ್ನು ವೇತನ ಸಹಾಯಾನುದಾನಕ್ಕೆ ಒಳಪಡಿಸಿ ಅನುಮೋದನೆ ನೀಡುವ ಬಗ್ಗೆ)
   2) ಆಪಾದಿತ ಅಧಿಕಾರಿ ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ) ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಸಮಜಾಯಿಷಿ ಹೇಳಿಕೆಗಳು:

ಮೇಲಿನ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಸರ್ಕಾರವು ಈ ಕೆಳಗಿನ ಅಂಶಗಳನ್ನು ಗಮನಿಸಿದೆ.

ತನಿಖಾಧಿಕಾರಿಗಳಾದ ಶ್ರೀ ಕೆ. ಸಿ. ಲಕ್ಷ್ಮೀನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರು ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ), ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ವಿರುದ್ಧ [illegible] ಪ್ರಕರಣವನ್ನು ದಿನಾಂಕ 03-01-2011 ರಂದು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬಹುಮಹಡಿ ಕಟ್ಟಡದ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 1/2011 ರಲ್ಲಿ ಲಂಚ ನಿರೋಧಕ ಕಾಯ್ದೆ-1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ) ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಫಿರ್ಯಾದಿಯಾದ ಶ್ರೀ ಬಿ. ಎಸ್. ರೇವಣ್ಣಗೌಡ, ಪ್ರಾಂಶುಪಾಲರು ಪುಷ್ಪರವಿ ನ್ಯಾಷನಲ್ ಐ.ಟಿ.ಐ. ಗಂಡಸಿ ಹ್ಯಾಂಡ್ ಪೋಸ್ಟ್ ಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರ ಪುಷ್ಪರವಿ ನ್ಯಾಷನಲ್ ಐ.ಟಿ.ಐ. ಕಾಲೇಜಿನ 9 ಜನ ಸಿಬ್ಬಂದಿಗಳನ್ನು ವೇತನ ಸಹಾಯಾನುದಾನಕ್ಕೆ ಒಳಪಡಿಸಿ ಅನುಮೋದನೆ ನೀಡಲು ರೂ. 10,75,000/-ಗಳ ಲಂಚಕ್ಕೆ ಒತ್ತಾಯಿಸಿ, ಫಿರ್ಯಾದಿದಾರರು ಚೌಕಾಸಿ ಮಾಡಿದ ನಂತರ ಲಂಚದ ಹಣ ರೂ. 10,00,000/-ಕ್ಕೆ ತೀರ್ಮಾನವಾಗಿ, ಈ ಪೈಕಿ ಫಿರ್ಯಾದಿದಾರರಿಂದ ಈಗ್ಗೆ ಸುಮಾರು 6 ತಿಂಗಳಿಗಳ ಹಿಂದೆ ಲಂಚದ ಹಣ ರೂ. 2,00,000/-ಗಳನ್ನು ಮುಂಗಡವಾಗಿ ಸ್ವೀಕರಿಸಿ, ಬಾಕಿ ಉಳಿದ ರೂ. 8,00,000/-ಗಳನ್ನು ಆರೋಪಿ-2 ಶ್ರೀ ಸುರೇಶ್ ಕುಮಾರ್ ರವರ ಮೂಲಕ ಸ್ವೀಕರಿಸುವಾಗ ದಿನಾಂಕ 04-01-2011 ರಂದು ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ವೃತ್ತ, ಬೆಂಗಳೂರು ಇಲ್ಲಿ

ಜೀಕಿಸಿದ ಟ್ರ್ಯಾಪ್ ಯಶಸ್ವಿಯಾಗಿದ್ದು, ಆರೋಪಿ-1 ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ), ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರುರವರು ಸದರಿ ಸರ್ಕಾರಿ ಕೆಲಸದ ಸಂಬಂಧ ತಾವು ಒತ್ತಾಯ ಮಾಡಿದ ಲಂಚದ ಹಣ ಅಕ್ರಮ ಸಂಭಾವನೆಯಾದ ರೂ. 8,00,000/-ಗಳನ್ನು ಆರೋಪಿ-2 ಶ್ರೀ ಸುರೇಶ್ ಕುಮಾರ್ ರವರಿಗೆ ನೀಡುವಂತೆ ಫಿರ್ಯಾದುದಾರರಿಗೆ ತಿಳಿಸಿದ ಮೇರೆಗೆ, ಫಿರ್ಯಾದುದಾರರು ಆರೋಪಿ-2 ರವರಿಗೆ ಅವರು ಕರ್ತವ್ಯ ನಿರ್ವಹಿಸುವ ಕೊಠಡಿಯಲ್ಲಿ ಲಂಚದ ಹಣವನ್ನು ನೀಡಿದಾಗ ಆರೋಪಿ-2 ರವರು ಫಿರ್ಯಾದುದಾರರಿಂದ ಲಂಚದ ಹಣ ರೂ. 8,00,000/-ಗಳನ್ನು ಸ್ವೀಕರಿಸಿ ಬೆಂಗಳೂರು ನಗರ ಪೊಲೀಸರ ಬಲೆಗೆ ನೇರವಾಗಿ ಸಿಕ್ಕಿಹಾಕಿಕೊಂಡಿರುತ್ತಾರೆ. ಆರೋಪಿ-2 ಶ್ರೀ ಸುರೇಶ್ ಕುಮಾರ್, ಕಛೇರಿ ಅಧೀಕ್ಷಕರವರ ಎರಡು ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ಅದ್ದಿಸಿ ತೊಳೆಸಿದಾಗ ಬಣ್ಣರಹಿತನಾದ ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗುವುದರ ಮೂಲಕ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ಆರೋಪಿತರುಗಳ ಮತ್ತು ಫಿರ್ಯಾದುದಾರರ ನಡುವೆ ನಡೆದಿರುವ ವಿದ್ಯಮಾನಗಳನ್ನು ಪ್ರತ್ಯಕ್ಷ ಸಾಕ್ಷಿ ನೆರಳು ಸಾಕ್ಷಿ ಹಾಗೂ ಇತರೆ ಸಾಕ್ಷಿದಾರರು ಗಮನಿಸಿದ್ದು, ಮಹಜರು ಸಮಯದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 8,00,000/-ಗಳನ್ನು ಆರೋಪಿ-2, ಶ್ರೀ ಸುರೇಶ್ ಕುಮಾರ್, ಕಛೇರಿ ಅಧೀಕ್ಷಕರು ರವರಿಂದ ಅವರು ಕುಳಿತಿದ್ದ ಚೇರಿನ ಎಡಭಾಗದ ಕಬೋರ್ಡ್‌ನಲ್ಲಿಟ್ಟುಕೊಂಡಿದ್ದು, ಅದನ್ನು ಯಥಾರೀತಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಅಲ್ಲದೆ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಉಲ್ಲೇಖಿತ(4)ರ ಪತ್ರದಲ್ಲಿ ಒದಗಿಸಿದ ಮಾಹಿತಿಯನುಸಾರ ಸರ್ಕಾರವು ಈ ಕೆಳಗಿನ ಅಂಶಗಳನ್ನು ಸಹ ಗಮನಿಸಿದೆ.

(ಅ) ಆರೋಪಿತರು ಲಂಚದ ಹಣಕ್ಕಾಗಿ ಒತ್ತಾಯಿಸಿ ಪಡೆದುಕೊಂಡಿರುವುದು ಡಿಜಿಟಲ್ ವಾಯ್ಸ್ ರೆಕಾರ್ಡಿಂಗ್‌ನಲ್ಲಿ ಇದ್ದ ಸಂಭಾಷಣೆಯಿಂದ ಹಾಗೂ ಬಟನ್ ಕ್ಯಾಮೆರಾದಲ್ಲಿನ ದೃಶ್ಯಾವಳಿಗಳಿಂದ ದೃಢಪಟ್ಟಿರುವುದು.

(ಆ) ಶ್ರೀ ಸುರೇಶ್ ಕುಮಾರ್, ಕಛೇರಿ ಅಧೀಕ್ಷಕರು ಇವರು ತಮ್ಮ ಮೇಲಾಧಿಕಾರಿ ಆರೋಪಿತರ ಪರವಾಗಿ ಲಂಚದ ಹಣವನ್ನು ಸ್ವೀಕರಿಸಿದ ಬಗ್ಗೆ ತನಿಖಾಧಿಕಾರಿ ಮುಂದೆ ಹಾಗೂ ನ್ಯಾಯಾಲಯದಲ್ಲಿ ಹೇಳಿಕೆಗಳನ್ನು ನೀಡಿರುವುದು.

(ಇ) ತನಿಖಾ ಕಾಲದಲ್ಲಿ ಸಂಗ್ರಹಿಸಿದ ಆರೋಪಿತರ ಹಾಗೂ ಫಿರ್ಯಾದುದಾರರ ಮೊಬೈಲ್ ಕರೆಗಳು ವಿವರಗಳು

(ಈ) ಆರೋಪಿತರು ಲಂಚದ ಹಣಕ್ಕಾಗಿ ಒತ್ತಾಯಿಸಿ ಸ್ವೀಕರಿಸಿರುವ ಬಗ್ಗೆ ಡಿಜಿಟಲ್ ವಾಯ್ಸ್ ರೆಕಾರ್ಡರ್ ಹಾಗೂ ಬಟನ್ ಕ್ಯಾಮೆರಾದಲ್ಲಿ ದಾಖಲಾಗಿರುವ ಧ್ವನಿ ಹಾಗೂ ದೃಶ್ಯಾವಳಿಗಳನ್ನು ಪರಿಶೀಲಿಸಿದ ಜಂಟಿ ನಿರ್ದೇಶಕರಾದ ಶ್ರೀ ವಿ. ಪಿ. ಈಶ್ವರ್ ನಾಯಕ್ ರವರು ನೀಡಿರುವ ದೃಢೀಕರಣ.

(ಉ) ತನಿಖಾ ಕಾಲದಲ್ಲಿ ಪಡೆದುಕೊಂಡ ಆರೋಪಿತರ ಮಾದರಿ ಧ್ವನಿ ಮತ್ತು ಫಿರ್ಯಾದುದಾರರು ದೂರಿನೊಂದಿಗೆ ಹಾಜರುಪಡಿಸಿದ್ದ ಡಿಜಿಟಲ್ ವಾಯ್ಸ್ ರಕಾರ್ಡಿಂಗ್ ನಲ್ಲಿನ ಆರೋಪಿತರ ಧ್ವನಿ ಒಂದಕ್ಕೊಂದು ತಾಳೆಯಾಗಿರುತ್ತವೆ ಹಾಗೂ ಈ ಸಂಬಂಧ ಎಫ್.ಎಸ್.ಎಲ್. ತಜ್ಞರು ಮೇಲ್ಕಂಡ ವಾಯ್ಸ್ ರೆಕಾರ್ಡರ್‌ಗಳಲ್ಲಿನ ಧ್ವನಿಯು ಆರೋಪಿತರ ಧ್ವನಿಗೆ ತಾಳೆಯಾಗಿರುತ್ತದೆ ಎಂದು ಸ್ಪಷ್ಟ ಅಭಿಪ್ರಾಯ ನೀಡಿರುವುದು.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ-1988 ರ ಕಲಂ 7, 13(1)(ಡಿ) ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆಯೆಂದು ಸರ್ಕಾರವು ಪರಿಗಣಿಸಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ-1988 ರ ಅನ್ವಯ ಕಲಂ 7, 13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತನನ್ನು ಕೆಲಸದಿಂದ ತೆಗೆದುಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ ಲಂಚ ನಿರೋಧಕ ಕಾಯ್ದೆ-1988ರ ಕಲಂ 19(1)(ಬಿ)ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿ/ನೌಕರರಾದ ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ), ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರನ್ನು ಕಲಂ 7 ಮತ್ತು 13(1)(ಡಿ) ಜೊತೆಗೆ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಆದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 8 ಇಟಿಐ 2011, ಬೆಂಗಳೂರು, ದಿನಾಂಕ : 12-12-2011**

ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ), ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರನ್ನು ಹುದ್ದೆಯಿಂದ ತೆಗೆದು ಹಾಕುವ/(ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಕೆ. ರಾಮಚಂದ್ರಪ್ಪ, ಜಂಟಿ ನಿರ್ದೇಶಕರು (ತ), ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರನ್ನು ಲಂಚ ನಿರೋಧಕ ಕಾಯ್ದೆ-1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಜೆ. ಎಸ್. ವಿಶ್ವನಾಥಪ್ಪ**

ಪೀಠಾಧಿಕಾರಿ

ಪಿ.ಆರ್. 60

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

## ಸಹಕಾರ ಸಚಿವಾಲಯ

**ವಿಷಯ :** ಮುತ್ತೂಟ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಲೇವಾದೇವಿ ಅಧಿನಿಯಮ 1961 ರಿಂದ ವಿನಾಯಿತಿ ನೀಡುವ ಬಗ್ಗೆ.

**ಓದಲಾಗಿದೆ :** ಸಹಕಾರ ಸಂಘಗಳ ನಿಬಂಧಕರು ಹಾಗೂ ಲೇವಾದೇವಿ ಮಹಾನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಎನ್‌ಎಂಎನ್/ವೈಎಂಸಿ/122/2010-11, ದಿನಾಂಕ 22-10-2011

**ಪ್ರಸ್ತಾವನೆ :**

ಮುತ್ತೂಟ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್, ಈ ಸಂಸ್ಥೆಯು ರಿಜಿಸ್ಟ್ರಾರ್ ಆಫ್ ಕಂಪನೀಸ್, ಕೇರಳ ಇವರಿಂದ (ಸಂಖ್ಯೆ: U65929KL1997PLCO11518 ದಿನಾಂಕ 19-03-2002 ಪ್ರಕಾರ) ನೋಂದಣಿಯಾಗಿದ್ದು, ಆರ್‌ಬಿಐನ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ವಿಭಾಗ

ಭಾರತೀಯ ರಿಸರ್ವ್ ಬ್ಯಾಂಕಿನಿಂದ. ಇವರಿಂದ (ಸಂಖ್ಯೆ: N 16.00170, ದಿನಾಂಕ 23-07-2002 ಪ್ರಕಾರ) ಎನ್‌ಬಿಎಫ್‌ಸಿ ಸಂಸ್ಥೆ ಎಂಬ ಪ್ರಮಾಣ ಪತ್ರ ಪಡೆದಿದ್ದು, ಕರ್ನಾಟಕದಲ್ಲಿಯೂ ಸಹ ಹಣಕಾಸಿನ ವ್ಯವಹಾರಗಳನ್ನು ನಡೆಸುತ್ತಿದ್ದು ತನ್ನ ಎಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ರೂ. 18.50/- ಲಕ್ಷ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಪಾವತಿಸಿರುತ್ತದೆ. ಈಗ ಸದರಿ ಸಂಸ್ಥೆಯು ಕರ್ನಾಟಕ ಲೇವಾದೇವಿ ಅಧಿನಿಯಮ 1961 ರಿಂದ ವಿನಾಯಿತಿ ನೀಡಲು ಸರ್ಕಾರಕ್ಕೆ ದಿನಾಂಕ 27-12-2010 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಮನವಿಯನ್ನು ಸಹಕಾರ ಸಂಘಗಳ ನಿಬಂಧಕರು ಪರಿಶೀಲಿಸಿ ವರದಿ ನೀಡಿರುತ್ತಾರೆ. ಈ ವರದಿಯ ಮೇರೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961 ತಿದ್ದುಪಡಿ ತರಲು ಉದ್ದೇಶಿಸಿದ್ದು, ಇದರ ಮೇರೆಗೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಂದ ಲೇವಾದೇವಿ ಅಧಿನಿಯಮದಿಂದ ಹೊರಗಿಡಲು ಪ್ರಸ್ತಾಪಿಸಲಾಗಿದೆ ಹಾಗೂ ಸದರಿ ಸಂಸ್ಥೆಯು ಸಾರ್ವಜನಿಕರಿಂದ ಕರ್ನಾಟಕ ಲೇವಾದೇವಿ ಅಧಿನಿಯಮದಲ್ಲಿ ನಿಗದಿಪಡಿಸಿರುವ ಬಡ್ಡಿದರಕ್ಕಿಂತ ಹೆಚ್ಚಿನ ಬಡ್ಡಿ ಪಡೆಯುತ್ತಿದ್ದಲ್ಲಿ ಕರ್ನಾಟಕ ಮಿತಿಮೀರಿದ ಬಡ್ಡಿವಿಧಿಸುವಿಕೆಯ ನಿಷೇದ ಅಧಿನಿಯಮ 2004ರಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿದ್ದು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಅವಕಾಶವಿರುವುದರಿಂದ ಮುತ್ತೂಟ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961ರ ಪ್ರಕರಣ 2(10)(iv)(ಬಿ) ರಡಿಯಲ್ಲಿ ವಿನಾಯಿತಿ ನೀಡಬಹುದೆಂದು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಮುಂದುವರೆದು, ಸದರಿ ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಪ್ರಕರಣ 45IA ರಡಿಯಲ್ಲಿ ನೋಂದಣಿಯಾಗಿರುವುದರಿಂದ ಅದರ ವ್ಯವಹಾರಗಳು ಆರ್‌ಬಿಐ ನಿಂದ ನಿಯಂತ್ರಣಕ್ಕೊಳಪಡುತ್ತವೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 23 ಸಿಎಂಎಲ್ 2011, ದಿನಾಂಕ 23-11-2011**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಲೇವಾದೇವಿ ಅಧಿನಿಯಮ 1961ರ ಪ್ರಕರಣ (2)ರ ಖಂಡ 10ರ ಉಪಖಂಡ (iv)ರ ಐಟಂ (ಬಿ) ಅಡಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮುತ್ತೂಟ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್. ಈ ಸಂಸ್ಥೆಯು ಸದರಿ ಐಟಂನ ಉಪಬಂಧದಿಂದ ಮುಂದಿನ ಆದೇಶದವರೆಗೆ ಈ ಕೆಳಗಿನ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಲಾಗಿದೆ.

1. ಸಾರ್ವಜನಿಕರಿಂದ/ಗ್ರಾಹಕರಿಂದ ಗಂಭೀರ ದೂರು ದಾಖಲಾಗಿ ಅಧಿಕ ಬಡ್ಡಿ ಪಡೆಯುತ್ತಿರುವುದು ಕಂಡುಬಂದಲ್ಲಿ ನೀಡಲಾದ ವಿನಾಯಿತಿಯನ್ನು ವಾಪಸ್ಸು ಪಡೆಯಲಾಗುವುದು.
2. ಕರ್ನಾಟಕ ಮಿತಿಮೀರಿದ ಬಡ್ಡಿವಿಧಿಸುವಿಕೆಯ ನಿಷೇಧ ಅಧಿನಿಯಮ 2004 ಅನ್ನು ಅನುಸರಿಸುವುದು
3. ದಿನಾಂಕ 31-3-2011ರ ಅಂತ್ಯಕ್ಕೆ ಸರ್ಕಾರಕ್ಕೆ ಪಾವತಿಸಿರುವ ಭದ್ರತಾ ಠೇವಣಿ ರೂ. 18,50/- ಲಕ್ಷ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ.ಆರ್. 61

## ಸಹಕಾರ ಸಚಿವಾಲಯ

**ವಿಷಯ :** ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ 2008-09,2009-10, 2010-11ನೇ ಸಾಲುಗಳ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆ ನಡೆಸಲು ಕಾಲಾವಕಾಶ ನೀಡುವ ಬಗ್ಗೆ.

**ಓದಲಾಗಿದೆ :** 1) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರ ಪತ್ರ ಸಂಖ್ಯೆ ಡಿಎಸ್‌ಕೆ-ಇಎಸ್ ಟಿಎಸ್-ಎಜಿಎಂ-118-2010-11, ದಿನಾಂಕ 13-07-2011.

2) ಸಹಕಾರ ಸಂಘಗಳ ಅಪರ ನಿಬಂಧಕರವರ ಪತ್ರ ಸಂಖ್ಯೆ:ಅನಿ-ಕೈಸ.ಸಂ.-2-164-ವಾಸ-2011-12, ದಿನಾಂಕ 21-09-2011.

**ಪ್ರಸ್ತಾವನೆ :**

ಮೇಲೆ ಓದಲಾದ 1 ರಲ್ಲಿನ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರು, ಪ್ರಸ್ತುತ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ದೊಡ್ಡಬಾತಿ. ಇದರ ಆರ್ಥಿಕ ಪರಿಸ್ಥಿತಿಯು ಕ್ಲಿಷ್ಟಕರವಾಗಿದ್ದು, ದಿನಾಂಕ 31-03-2011ಕ್ಕೆ ಅಂದಾಜು ರೂ. 74.00 ಕೋಟಿಗಳಷ್ಟು ನಷ್ಟದಿರುತ್ತವೆ. ಕಾರ್ಖಾನೆಯನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಆದರೆ ಗುತ್ತಿಗೆದಾರರು ಮುಂಗಡ ಗುತ್ತಿಗೆ ಹಣ ಪಾವತಿಸಿರುವುದಿಲ್ಲ. ಆದ ಕಾರಣ ಕಾರ್ಖಾನೆಗೆ ಆದಾಯದ ಕೊರತೆ ಇರುತ್ತದೆ. ಕಾರ್ಖಾನೆಯು ಸಿಬ್ಬಂದಿಯನ್ನು ಗುತ್ತಿಗೆದಾರರ ವಶಕ್ಕೆ ನೀಡಿರುವುದರಿಂದ ಕೆಲವೇ ಸಿಬ್ಬಂದಿಯವರಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಕಾರ್ಖಾನೆಯು 2006-07ನೇ ಸಾಲಿನಿಂದ 2010-11ನೇ ಸಾಲುಗಳವರೆಗಿನ ಲೆಕ್ಕ ಪರಿಶೋಧನಾ ಕಾರ್ಯಪೂರ್ಣಗೊಂಡಿಲ್ಲ. ಕಾರ್ಖಾನೆಯು ವಾರ್ಷಿಕ ಮಹಾಸಭೆಗಳನ್ನು ನಡೆಸಲು ಸಾಕಷ್ಟು ವೆಚ್ಚವಾಗಲಿದ್ದು, ಈ ಖರ್ಚುಗಳನ್ನು ಭರಿಸಲು ಕಾರ್ಖಾನೆಯಲ್ಲಿ ಆರ್ಥಿಕ ಲಭ್ಯತೆ ಇರುವುದಿಲ್ಲ. ಆದ್ದರಿಂದ 2008-09, 2009-10 ಹಾಗೂ 2010-11ನೇ ಸಾಲುಗಳ ವಾರ್ಷಿಕ ಮಹಾ ಸಭೆಗಳನ್ನು ನಡೆಸಲು ಇನ್ನು 3 ವರ್ಷಗಳ ಕಾಲ, ಕಾಲಾವಕಾಶ ನೀಡುವಂತೆ ದಿನಾಂಕ 31-05-2011 ರಂದು ನಡೆದ ಕಾರ್ಖಾನೆಯ ವಿಶೇಷಾಧಿಕಾರಿಗಳ ಸಭೆಯು ತೀರ್ಮಾನಿಸಲಾಗಿದೆ. ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಖಾನೆಯ 2008-09, 2009-10, 2010-11ನೇ ಸಾಲುಗಳ ವಾರ್ಷಿಕ ಮಹಾಸಭೆಯನ್ನು ನಡೆಸಲು ಇನ್ನು ಮೂರು ವರ್ಷಗಳ ಕಾಲಾವಧಿಗೆ ವಿಸ್ತರಿಸುವುದು ಸಮಂಜಸವಾಗಿದ್ದು, ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ. ಮೇಲೆ ಓದಲಾದ 2ರಲ್ಲಿನ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು, ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 32 ಸಸಕಾ 2010 ಬೆಂಗಳೂರು, ದಿನಾಂಕ 21/25-11-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ 2008-09, 2009-10, 2010-11ನೇ ಸಾಲಿನ ವಾರ್ಷಿಕ ಮಹಾ ಸಭೆಗಳನ್ನು 2011-12ನೇ ಸಾಲಿನ ವಾರ್ಷಿಕ ಮಹಾ ಸಭೆಯೊಂದಿಗೆ ಜರುಗಿಸಲು ದಿನಾಂಕ 30-09-2012ರ ವರೆಗೆ ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1) ಹಾಗೂ ಕಲಂ 121(1) ರಡಿಯಲ್ಲಿ ಕಾಲಾವಕಾಶ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2012ರವರೆಗೆ ಜಾರಿಯಲ್ಲಿರತಕ್ಕದ್ದು, ಈ ಅವಧಿ ಮುಗಿದ ನಂತರ ಈ ಮಾರ್ಪಾಡಿನ ಮುಂಚಿನಂತೆ ಮೊದಲು ಜಾರಿಯಲ್ಲಿದ್ದಂತೆ ಪ್ರಕರಣ 27(1)ರ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ಸೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ.ಆರ್. 62

## ಸಹಕಾರ ಸಚಿವಾಲಯ

**ವಿಷಯ :** ಆರ್.ಐ.ಡಿ.ಎಫ್-XVI & XVನೇ ಯೋಜನೆಯಡಿಯಲ್ಲಿ ಗೋದಾಮು ನಿರ್ಮಾಣ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** ಸರ್ಕಾರದ ಅದೇಶ ಸಂಖ್ಯೆ: ಸಇ 43 ರಾಉನಿ 2009, ದಿನಾಂಕ 03-01-2011

**ಪ್ರಸ್ತಾವನೆ :**

ಮೇಲೆ ಓದಲಾದ ಆದೇಶದಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಆರ್.ಐ.ಡಿ.ಎಫ್-XIV & XVನೇ ಯೋಜನೆಯಡಿ ಗೋದಾಮು ನಿರ್ಮಾಣ ಕಾಮಗಾರಿಗಳಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದಿಂದ ರೂ. 800.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ: "6408-02-190-1-01-436-ಸಾಲ (ಯೋಜನೆ)" ಯಡಿ ಬಿಡುಗಡೆ ಮಾಡಿದ್ದು, ಅದರಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಸರ್ಕಾರಕ್ಕೆ ಮರು ಪಾವತಿ ಮಾಡಬೇಕಾದ ಅಸಲು ಕಂತಿನಮೊತ್ತ ರೂ. 1,95,77,000-00 (ಒಂದು ಕೋಟಿ ತೊಂಬತ್ತೈದು ಲಕ್ಷದ ಎಪ್ಪತ್ತೇಳು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ: "6408-02-190-0-01-436-ಸಾಲ (ಯೋಜನೆ)" ಯಡಿ ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಲಾಗಿತ್ತು. ಸದರಿ ಲೆಕ್ಕ ಶೀರ್ಷಿಕೆಯು ತಪ್ಪಾಗಿ ನಮೂದಾಗಿದ್ದರಿಂದ ಅಸಲನ್ನು ದಿನಾಂಕ 31-03-2011ರ ಒಳಗಾಗಿ ಹೊಂದಾಣಿಕೆ ಮಾಡಲಾಗಲಿಲ್ಲವೆಂದು ಕರ್ನಾಟಕ ಉಗ್ರಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 16-07-2011ರ ಪತ್ರದಲ್ಲಿ ತಿಳಿಸಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಸಇ 43 ರಾಉನಿ 2009 (ಭಾಗ-1) ಬೆಂಗಳೂರು, ದಿನಾಂಕ 20-08-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಆರ್.ಐ.ಡಿ.ಎಫ್-XIV & XVನೇ ಯೋಜನೆಯಡಿಯಲ್ಲಿ ಗೋದಾಮು ನಿರ್ಮಾಣ ಕಾಮಗಾರಿಗಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "6408-02-190-1-01-436-ಸಾಲ (ಯೋಜನೆ)" ಯಡಿಯಲ್ಲಿ ಅವಕಾಶ ಮಾಡಿರುವ ರೂ. 15.00 ಕೋಟಿಗಳ ಅನುದಾನದಲ್ಲಿ ರೂ. 334.64 ಲಕ್ಷಗಳನ್ನು ಈ ಕೆಳಕಂಡ ರೀತಿಯಲ್ಲಿ ಹಾಗೂ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರ ಮಂಜೂರಾತಿ ನೀಡಿದೆ.

(1) ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಸರ್ಕಾರಕ್ಕೆ ಮರು ಪಾವತಿ ಮಾಡಬೇಕಾದ ಸಾಲದ ಮೇಲಿನ ಬಡ್ಡಿಯ ಮೊತ್ತವಾಗಿ ರೂ. 334.64 (ಮುನ್ನೂರ ಮೂವತ್ತ ನಾಲ್ಕು ಲಕ್ಷದ ಅರವತ್ತನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಲಕ್ಷಗಳನ್ನು ಲೆಕ್ಕ ಶೀರ್ಷಿಕೆ "0049-04-190-0-09" ಕ್ಕೆ ಪುಸ್ತಕ ಹೊಂದಾಣಿಕೆ ಮಾಡುವುದು.

(2) ಯೋಜನೆಯಡಿ ಬಿಡುಗಡೆ ಮಾಡಲಾದ ಹಣವನ್ನು ನಬಾರ್ಡ್ ಸಂಸ್ಥೆಯು ಸಾಲಕ್ಕೆ ವಿಧಿಸುವ ಷರತ್ತು ಮತ್ತು ನಿಬಂಧನೆಗಳಂತೆಯೇ ಹಾಗೂ ಬೇರೆ ಯಾವುದೇ ಇತರೆ ಯೋಜನೆಗೆ ಬಳಸದೆ ಉದ್ದೇಶಿತ ಕಾಮಗಾರಿಗಳಿಗೆ ಮಾತ್ರ ಬಳಸತಕ್ಕದ್ದು.

(3) ಇನ್ನು ಮುಂದೆ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಈ ಹಿಂದಿನ ಆರ್.ಐ.ಡಿ.ಎಫ್.-XIV & XVನೇ ಯೋಜನೆಯಡಿ ಬಿಡುಗಡೆ ಮಾಡಿರುವ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ದಿನಾಂಕ 31-12-2011 ರೊಳಗಾಗಿ ಮರುಪಾವತಿ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

(4) ಸಾಲ ಮತ್ತು ಬಡ್ಡಿ ಮರುಪಾವತಿಯ ಬಗ್ಗೆ ಸರ್ಕಾರಕ್ಕೆ ಖಚಿತ ಮಾಹಿತಿಯನ್ನು ನೀಡತಕ್ಕದ್ದು

(5) ಪ್ರಧಾನ ಮಹಾಲೇಖಪಾಲ (ಲೆಕ್ಕ ಮತ್ತು ಹಕ್ಕು) ರವರು ಈ ಲೆಕ್ಕ ಹೊಂದಾಣಿಕೆಯನ್ನು 2011-12ನೇ ಸಾಲಿನ ಸರ್ಕಾರದ ಪುಸ್ತಕದಲ್ಲಿ ಮಾಡಬೇಕೆಂದು ಕೋರಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 290 ವೆಚ್ಚ-2, 2011, ದಿನಾಂಕ 02-08-2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಹಕಾರ ಇಲಾಖೆ

ಪಿ.ಆರ್. 63

ಸಹಕಾರ ಸಚಿವಾಲಯ

ವಿಷಯ : ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ. [illegible] 2010-11ನೇ ಸಾಲುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸಲು [illegible]

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಸಿಒ 04 ಸಸಕಾ 2010, ದಿನಾಂಕ [illegible] 2010, [illegible] 2010 ಮತ್ತು 15-02-2011.

2) ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಬೆಳಗಾವಿ [illegible] ಎಂಸಿಎಸ್ಎಂ/ವಾ.ಮ.ಸಭೆ/2011-12/67, ದಿನಾಂಕ [illegible]-07-2011

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., [illegible] 2009-10 ಮತ್ತು 2010-11ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 30-09-2011ರ ಒಳಗಾಗಿ [illegible] ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಅಡಿಯಲ್ಲಿ ಪ್ರದತ್ತವಾದ [illegible] ಪ್ರಕರಣ 27(1)ರ ಉಪಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ [illegible] ಪತ್ರದಲ್ಲಿ [illegible] ಕೆಲಸವನ್ನು ಪೂರ್ತಿಗೊಳಿಸುವ ಕೆಲಸ ತೀವ್ರಗತಿಯಲ್ಲಿ ಜರುಗಿದ್ದು ಅಲ್ಲದೇ ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿ [illegible] ಎಲ್ಲಾ ಹಳ್ಳಿಗಳ ಜಮೀನುಗಳು ಜಲಾವೃತವಾಗಿದ್ದು ರಸ್ತೆ ಸಂಪರ್ಕ ಸಹ ಕಡಿದುಹೋಗಿದೆ ಹಾಗೂ ಇನ್ನೂ ಮಳೆ ಮುಂದುವರೆಯುವ ಸಂಭವವಿದೆಯೆಂದು ಈ ಕಾರಣದಿಂದಾಗಿ 2008-09, 2009-10 ಮತ್ತು 2010-11ನೇ ಸಾಲುಗಳ ವಾರ್ಷಿಕ [illegible] ಇನ್ನೂ [illegible] ಅವಧಿಗೆ ಅಂದರೆ ದಿನಾಂಕ 31-03-2012ರ ಒಳಗಾಗಿ ಜರುಗಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಸಕಾ 2011, ದಿನಾಂಕ [illegible]-09-2011

ಪ್ರಸ್ತಾವನೆಯಲ್ಲಿ [illegible] ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು [illegible] ಮತ್ತು 2010-11ನೇ ಸಾಲುಗಳ ವಾರ್ಷಿಕ ಮಹಾಸಭೆಯನ್ನು [illegible] ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ. ಇನ್ನು ಮುಂದೆ ಯಾವುದೇ ತರಹದ ವಿಸ್ತರಣೆ ನೀಡಲಾಗುವುದಿಲ್ಲವೆಂದು ಸ್ಪಷ್ಟೀಕರಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ [illegible] ಜಾರಿಯಲ್ಲಿರತಕ್ಕದ್ದು. ಈ ಅವಧಿ [illegible] ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ಮಾಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ

ಪಿ.ಆರ್. 64

ಸಹಕಾರ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಸಇ 134 ಸಂಮಾಸ 2011, ಬೆಂಗಳೂರು, ದಿನಾಂಕ 16-11-2011

ಸರ್ಕಾರಿ ಆದೇಶ ಸಂಖ್ಯೆ: ಸಇ 134 ಸಂಮಾಸ 2011, ದಿನಾಂಕ 15-10-2011ರ ಆದೇಶದ ಕಂಡಿಕೆ 2ರ [illegible] ಸೇರಿಸಿ ಓದಿಕೊಳ್ಳತಕ್ಕದ್ದು.

"ಬಿಡುಗಡೆ ಮಾಡಲಾದ ಮೊತ್ತವನ್ನು ಖಜಾನೆಯಿಂದ [illegible] ಆದೇಶಿಸಲಾಗಿದೆ"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ಮಾಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ

ಪಿ.ಆರ್. 65

## ಸಹಕಾರ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸಇ 43 ರಾಉನಿ 2009 ಭಾ–1, ಬೆಂಗಳೂರು, ದಿನಾಂಕ : 13–09–2011

ಸರ್ಕಾರಿ ಆದೇಶ ಸಂಖ್ಯೆ : ಸಇ 43 ರಾಉನಿ 2009 ಭಾ–1, ದಿನಾಂಕ : 20–08–2011ರ ಆದೇಶ ಭಾಗದ ಕಂಡಿಕೆ 1ರ ಉಪ ಕಂಡಿಕೆ (5) ನಂತರ [illegible] ಸೇರಿಸಿಕೊಳ್ಳತಕ್ಕದ್ದು.

"[illegible] ಬೆಂಗಳೂರು [illegible] ಹಣ ಸಂದಾಯ ಸ್ವೀಕೃತಿಯ ಮೇಲೆ ಸರ್ಕಾರದ [illegible] ಬೆಂಗಳೂರು [illegible] ರಸೀದಿ ಹಾಗೂ ಟಿ.ಟಿ.ಆರ್ ಹೊಂದಿ[illegible]".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 66

## HORTICULTURE SECRETARIAT

**Sub:** Release of State share for National Horticulture Mission (NHM) programme during 2011-12-reg.

*Read:*
1. Government Order No. HCD 30 HPP 2011, dated : 23-08-2011.
2. Corrigendum No. HCD 30 HPP 2011 dated 27-08-2011.
3. Government Order No. HCD 30 HPP 2011, dated : 29-08-2011.
4. Government of India letter No. 18-89/2009-NHM dated : 02-11-2011.
5. Letter of Director of Horticulture No. ಮಿನಿ/ಕರಾತೋಮಿವ/ಎನಿ–1/48/2011-12 dated : 10-11-2011.
6. Letter of Director of Horticulture No. ಮಿನಿ/ಕರಾತೋಮಿವ/ಎನಿ–1/48/2011-12 dated : 25-11-2011.

**PREAMBLE:**

1. An amount of Rs. 2500.00 lakhs has been earmarked in the budget during 2011-12 under the State Sector Scheme namely, "State share for National Horticulture Mission", Head of Account 2401-00-800-2-30 (plan) towards the State share required for the National Horticulture Mission Programme and Rs. 876.455 lakhs (796.875 + 79.580) has been released to the Director of Horticulture towards the matching State share vide Government Order read at (1) (2) and (3) above.
2. Government of India has now conveyed the sanction to the payment of the second installment of Central share of Rs. 3100.00 lakhs under National Horticulture Mission (NHM) during 2011-12 vide Government of India letter read at (4) above.
ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 24,14,911/-ಗಳ ಮೇಲೆ ಶೇ. 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 27,52,999/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 33 ಏನೀಯೋ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಹಾಗೂ ತಾಲ್ಲೂಕಿನ ಕಲಾದಗಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ವಿದ್ಯುತ್ತೀಕರಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 24,14,911/-ಗಳ ಮೇಲೆ ಶೇ. 14.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 27,52,999/- ಗಳಿಗೆ (ರೂ. ಇಪ್ಪತ್ತೇಳು ಲಕ್ಷ ಐವತ್ತೆರಡು ಸಾವಿರದ ಒಂಭೈನೂರ ತೊಂಭತ್ತೊಂಭತ್ತು ಮಾತ್ರ)ಗಳಿಗೆ ಮೆ. ಗುರುದತ್ತ ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ರುದ್ರಮೂರ್ತಿ**
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 85

## ಜಲ ಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕೊತ್ತಪಲ್ಲಿ ಗ್ರಾಮದ ಹತ್ತಿರ (ಪಾಕಲ್ ಸೈಟ್-1) ಹೊಸಕೆರೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(17) ದಿನಾಂಕ: 09-07-2010.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ -14/2011-12/5729 ದಿನಾಂಕ: 10-11-2011.

**ಪ್ರಸ್ತಾವನೆ:**

ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕೊತ್ತಪಲ್ಲಿ ಗ್ರಾಮದ ಹತ್ತಿರ (ಪಾಕಲ್ ಸೈಟ್-1) ಹೊಸಕೆರೆ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

| | |
|---|---|
| ರಾಜ್ಯ ಟೆಂಡರ್ ಬುಲೆಟಿನ್ | 16-07-2011 |
| ಜಿಲ್ಲಾ ಟೆಂಡರ್ ಬುಲೆಟಿನ್ | 30-07-2011 |
| ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆ | 14-07-2011 |

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 21-10-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ | ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ |
|---|---|---|---|---|
| ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ | | | | ರೂ. 2,87,44,422/- |
| ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ | | | | ರೂ. 2,87,17,234/- |
| 1 | ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್ ಪ್ರೈಲಿ., ಒಂದನೇ ದರ್ಜೆ ಗುತ್ತಿಗೆದಾರರು | 3,05,38,461/- | 6.24 ಹೆಚ್ಚು | 6.34 ಹೆಚ್ಚು |

ಮೇಲ್ಕಂಡಂತೆ ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.34

ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರವಲಯ ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 15-11-2011ರ ಪತ್ರದಲ್ಲಿ ಪ್ರಸ್ತುತ ಕಚ್ಚಾಸಾಮಗ್ರಿಗಳ ದರಗಳಲ್ಲಿ ಸಾಗಣೆ ದರಗಳಲ್ಲಿ, ಕೂಲಿ ಕಾರ್ಮಿಕರ ಭತ್ಯೆಯಲ್ಲಿ ಉಂಟಾಗಿರುವ ಹೆಚ್ಚಳವನ್ನು ಪರಿಗಣಿಸಿ ಅವರು ನಮೂದಿಸಿದ ದರಗಳು ಸಮಂಜಸವಾಗಿರುವುದಾಗಿ ತಿಳಿಸಿರುತ್ತಾರೆ. ಆದರೂ ಅವರ ಟೆಂಡರ್ ದರಗಳನ್ನು ಪ್ರಸಕ್ತ ಸಾಲಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತದ ಮೇಲೆ ಶೇಕಡ 6.30 ರಷ್ಟು ಹೆಚ್ಚಿನ ದರಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಹಮತಿಸಿರುತ್ತಾರೆ.

ಈ ಪ್ರಸ್ತಾವನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,87,17,234ಗಳ ಮೇಲೆ ಶೇ. 6.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 3,04,40,268/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 14 ಹೊಕೆನಿ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕೊತ್ತಪಲ್ಲಿ ಗ್ರಾಮದ ಹತ್ತಿರ (ಪಾಕಲ್ ಸೈಟ್-1) ಹೊಸಕೆರೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,87,17,234/-ಗಳ ಮೇಲೆ ಶೇ. 6.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 3,04,40,268/- ಗಳಿಗೆ (ರೂ. ಮೂರು ಕೋಟಿ ನಾಲ್ಕು ಲಕ್ಷ ನಲವತ್ತು ಸಾವಿರದ ಇನ್ನೂರ ಅರವತ್ತೆಂಟು ಮಾತ್ರ)ಗಳಿಗೆ ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ರುದ್ರಮೂರ್ತಿ**

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 86 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

## ಜಲ ಸಂಪನ್ಮೂಲ ಸಚಿವಾಲಯ

**ವಿಷಯ :** ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಯನ್ನು ಕೈಬಿಟ್ಟು ಅದರ ಭೂಸ್ವಾಧೀನ ವೆಚ್ಚಕ್ಕಾಗಿ ಬಿಡುಗಡೆಯಾಗಿರುವ ಮೊತ್ತವನ್ನು ಇತರ ಕಾಮಗಾರಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಕುರಿತು.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಹೊಕೆನಿ 2007, ದಿನಾಂಕ: 29-01-2007.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 19 ಭೂಸ್ವಾಪ್ರ 2011, ದಿನಾಂಕ: 30-03-2011.
3. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ, ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ / ಬಿಜೆಪಿ / ಪಿಬಿ-9 / ಬಿಜ್ಜರಗಿ ಜಿನುಗುಕೆರೆ / 2011-12/2927 / ದಿನಾಂಕ: 01-06-2011.
4. ಸರ್ಕಾರದ ಪತ್ರ ಸಂಖ್ಯೆ: ಸನೀಇ 05 ಹೊಕೆನಿ (ತಾಂತ್ರಿಕ) 2011 (ಭಾಗ-1) ದಿನಾಂಕ: 08-06-2011.
5. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ ಮುಇಂ/ಸನೀ(ಉ)ವ/ಬಿಜೆಪಿ/ಭೂ ಸ್ವಾಧೀನ/2011-12/6270 ದಿನಾಂಕ: 09-12-2011.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಿಜಾಪುರ ಜಿಲ್ಲೆ, ಬಿಜಾಪುರ ತಾಲ್ಲೂಕಿನ ಬಿಜ್ಜರಗಿ (ಸೈಟ್-II) ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯ ರೂ. 49.65 ಲಕ್ಷ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರ ಪ್ರಸ್ತಾವನೆಯಂತೆ, ಈ ಕಾಮಗಾರಿಯ ಭೂಸ್ವಾಧೀನಕ್ಕಾಗಿ ರೂ. 1,06,83,052/- ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಭೂಸ್ವಾಧೀನಕ್ಕಾಗಿ ಬಿಡುಗಡೆಯಾಗಿರುವ ಈ ಮೊತ್ತವು ಸೇರಿದಂತೆ ಮೇಲ್ಕಂಡ ಕಾಮಗಾರಿಗೆ ಒಟ್ಟು ರೂ. 2,10,00,000/- ಆಗುವುದೆಂದು, ಇದನ್ನು ಈ ಕಾಮಗಾರಿಯ ಮಂಜೂರಾದ ಅಂದಾಜು ಮೊತ್ತ ರೂ. 49.65 ಲಕ್ಷಕ್ಕೆ ಹೋಲಿಸಿದಾಗ 4 ರಷ್ಟು ಆಗುತ್ತದೆಂದು ಹಾಗೂ ಉದ್ದೇಶಿತ ಕಾಮಗಾರಿಯ ಕೇವಲ ಜಿನುಗು ಕೆರೆಯಾಗಿದ್ದು, ಮೂಲ ಅಂದಾಜಿನಲ್ಲಿ ಪರಿಗಣಿಸಿರುವ ಪರೋಕ್ಷ ನೀರಾವರಿ ಪ್ರದೇಶ 45 ಹೆಕ್ಟೇರ್‌ಗೆ ಈ ಮೊತ್ತವನ್ನು ಪರಿಗಣಿಸಿದಾಗ ಈ ಯೋಜನೆಯು ಆರ್ಥಿಕವಾಗಿ ಅಶಕ್ಯವೆಂದು ಮುಖ್ಯ ಇಂಜಿನಿಯರ್ ವರದಿ ಮಾಡಿರುತ್ತಾರೆ. ಈ ಹಿನ್ನಲೆಯಲ್ಲಿ ಮುಖ್ಯ ಇಂಜಿನಿಯರ್ ಪ್ರಸ್ತಾವನೆಯಂತೆ ಈ ಕಾಮಗಾರಿಯನ್ನು ಕೈ ಬಿಟ್ಟು ಅದರ ಭೂಸ್ವಾಧೀನಕ್ಕಾಗಿ ಬಿಡುಗಡೆಯಾಗಿದ್ದ ಮೊತ್ತವನ್ನು ಇತರ ಕಾಮಗಾರಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಅನುಮೋದನೆ ನೀಡಲಾಗಿದೆ.

ಮೇಲೆ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 05 ಹೊಕೆನಿ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್ 2011**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗೆ ದಿನಾಂಕ: 29-01-2007 ರ ಸರ್ಕಾರದ ಆದೇಶದಲ್ಲಿ ನೀಡಲಾಗಿದ್ದ ಆಡಳಿತಾತ್ಮಕ ಅನುಮೋದನೆಯನ್ನು ರದ್ದುಪಡಿಸಲಾಗಿದೆ.

ದಿನಾಂಕ: 30-03-2011ರ ಸರ್ಕಾರದ ಆದೇಶದಲ್ಲಿ ಈ ಕಾಮಗಾರಿಯ ಭೂಸ್ವಾಧೀನ ವೆಚ್ಚಕ್ಕಾಗಿ 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4702-00-800-1-00-132-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೈಮ್‌ಗಳ ಇತ್ಯರ್ಥ ಬಂಡವಾಳ ವೆಚ್ಚಗಳು (ಯೋಜನೆ) ರಡಿ ಬಿಡುಗಡೆಯಾಗಿರುವ ಮೊತ್ತ ರೂ. 1,06,83,052/- ಗಳನ್ನು ಈ ಮೂಲಕ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ರುದ್ರಮೂರ್ತಿ**

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 87

## ಜಲ ಸಾರಿಗೆ ಸಚಿವಾಲಯ

**ವಿಷಯ :** ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಗೆ ಶ್ರೀ ಡಿ. ರಾಘವೇಂದ್ರರಾವ್ ಇವರನ್ನು ಸದಸ್ಯರನ್ನಾಗಿ ನೇಮಕ ಮಾಡುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 41 ಶಿಸನೇ 2002, ದಿನಾಂಕ: 17-06-2002.
2. ಸರ್ಕಾರದ ಆದೇಶ ಸಂಖ್ಯೆ: ಲೋಇ 64 ಇಎಪಿ 2008, ದಿನಾಂಕ: 03-11-2008.
3. ಸರ್ಕಾರದ ಆದೇಶ ಸಂಖ್ಯೆ: ಲೋಇ 64 ಇಎಪಿ 2008, ದಿನಾಂಕ: 26-11-2008.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಶಿಸನೇ 2009, ದಿನಾಂಕ: 28-04-2009.
5. ಅಧ್ಯಕ್ಷರು, ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆ ಇವರ ಪತ್ರ ಸಂಖ್ಯೆ: ಮುಮಂ:ಕಾಗುನಿಕಾ:771:2011-12 ದಿನಾಂಕ: 08-09-2011.

**ಪ್ರಸ್ತಾವನೆ:**

ಮೇಲೆ ಓದಲಾದ (2) ರ ಆದೇಶದಲ್ಲಿ ಡಾ: ಸಿ.ಎಸ್. ವಿಶ್ವನಾಥ್, ಅಧ್ಯಕ್ಷರು, ಟಾರ್‌ಸ್ಟೀಲ್ ರಿಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಬೆಂಗಳೂರು. ಇವರ ಅಧ್ಯಕ್ಷತೆಯಲ್ಲಿ 9 ಜನ ಸದಸ್ಯರುಗಳನ್ನೊಳಗೊಂಡಂತೆ ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯನ್ನು ರಚಿಸಲಾಗಿದೆ.

ಮೇಲೆ ಓದಲಾದ (1) ಮತ್ತು (4)ರ ಆದೇಶದಲ್ಲಿ ಕಾಮಗಾರಿ ಗುಣನಿಯಂತ್ರಣ ಕಾರ್ಯಪಡೆಯ ಅಧ್ಯಕ್ಷರಿಗೆ ಸಚಿವರ ಸ್ಥಾನಮಾನ ನೀಡಿ ವೇತನ ಸೌಲಭ್ಯ : ಸಿಬ್ಬಂದಿ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ಅಧ್ಯಕ್ಷರು, ಕಾಮಗಾರಿ ಗುಣನಿಯಂತ್ರಣ ಕಾರ್ಯಪಡೆಗೆ ಉಲ್ಲೇಖ ನಿಬಂಧನೆಗಳನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (5)ರ ದಿನಾಂಕ: 08-09-2011ರ ಡಾ: ಸಿ.ಎಸ್. ವಿಶ್ವನಾಥ್, ಅಧ್ಯಕ್ಷರು, ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆ ಇವರು, ಶ್ರೀ ಡಿ. ರಾಘವೇಂದ್ರರಾವ್ ಇವರು ವಾಹನ ಸಂಚಾರ : ಸಾಗಾಣಿಕೆ ಸಮಸ್ಯೆಗಳ ಪರಿಹಾರ ಜ್ಞಾನವನ್ನು ಹೊಂದಿದ್ದು (Transportation Expert) ಇಂತಹ ಯುವ ಪೀಳಿಗೆಯ ಒಬ್ಬ ವ್ಯಕ್ತಿಯನ್ನು ಕಾರ್ಯಪಡೆಯ ಸದಸ್ಯರಾಗಿ ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿದ್ದು, ನೇಮಕ ಮಾಡಿಕೊಳ್ಳುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಅಧ್ಯಕ್ಷರು, ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಲೋಇ 147 ಸ್ವೀಮರ 2011, ಬೆಂಗಳೂರು, ದಿನಾಂಕ: 26ನೇ ನವೆಂಬರ್ 2011**

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಡಿ. ರಾಘವೇಂದ್ರರಾವ್, ವಾಹನ ಸಂಚಾರ : ಸಾಗಾಣಿಕೆ ತಜ್ಞರು (Transportation Expert) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯ ಸದಸ್ಯರನ್ನಾಗಿ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಹೆಚ್.ಸಿ. ರಾಜಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು

ಜಲಸಾರಿಗೆ ಇಲಾಖೆ (ಸೇವೆಗಳು-ಎ).

ಪಿ.ಆರ್. ನಂ. 88

## ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

**ವಿಷಯ :** ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸ್ಥಾಪನೆ ಬಗ್ಗೆ

**ಓದಲಾಗಿದೆ:** ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ವೇದಿಕೆ ಇವರ ದಿನಾಂಕ:10-8-2011ರ ಪತ್ರ

**ಪ್ರಸ್ತಾವನೆ :**

ಕರ್ನಾಟಕ ರಾಜ್ಯದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹಾಗೂ ಕೇರಳ ರಾಜ್ಯದ ಕೆಲವು ಪ್ರದೇಶಗಳಲ್ಲಿ ನೂರಾರು ವರ್ಷಗಳಿಂದ ವಾಸಿಸುತ್ತಿರುವ ಹಿಂದಿನಿಂದಲೇ ಬಹುಸಂಖ್ಯಾತ ಜನರ ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಒಳಪಟ್ಟ-ಗೌಡಜನಾಂಗದವರ ಮಾತೃಭಾಷೆ ಅರೆಭಾಷೆ ಆಗಿದೆ. ಈ ಭಾಷೆಯನ್ನು ಮಾತನಾಡುವ ಜನರು ಇಂದು ಈ ಎರಡು ಜಿಲ್ಲೆಗಳು ಮತ್ತು ಅದರ ಅಕ್ಕ ಪಕ್ಕಗಳಲ್ಲದೆ ಮೈಸೂರು. ಬೆಂಗಳೂರು. ಮುಂಬಯಿ. ದೆಹಲಿ ಹಾಗೂ ಇಲ್ಲಿಂದ ವಲಸೆ ಹೋದ ಜನರು ಮಧ್ಯಪ್ರಾಚ್ಯ, ಅಮೆರಿಕ ಮುಂತಾದ ದೇಶಗಳಲ್ಲೂ ನೆಲೆ ನಿಂತು ಈ ಭಾಷೆಯನ್ನೇ ಮಾತೃ ಭಾಷೆಯನ್ನಾಗಿ ಆಡುತ್ತಿದ್ದಾರೆ. ಈ ಭಾಷೆಗೆ ಸುಮಾರು 500 ವರ್ಷಗಳ ಇತಿಹಾಸವಿದ್ದು ತನ್ನದೇ ಆದ ವಿಶಿಷ್ಟವಾದ ಸಂಸ್ಕೃತಿ ಅನನ್ಯತೆಯನ್ನು ಹೊಂದಿದ್ದು, ಈ ಭಾಷೆ ಸಂಸ್ಕೃತಿಯ ಬೆಳವಣಿಗೆಗೆ ಅರೆಭಾಷೆ ಅಕಾಡೆಮಿಯನ್ನು ಸ್ಥಾಪಿಸಲು ಓದಲಾದ ಪತ್ರದಲ್ಲಿ ಕೋರಲಾಗಿದೆ.

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 1024 ಕಸಧ 2011, ಬೆಂಗಳೂರು, ದಿನಾಂಕ: 15ನೇ ಡಿಸೆಂಬರ್ 2011.

ಅರೆಭಾಷೆ ಸಂಸ್ಕೃತಿಯ ಬೆಳವಣಿಗೆಗೆ ಉತ್ತೇಜನ ನೀಡಿ ಅಭಿವೃದ್ಧಿಪಡಿಸುವ ಉದ್ದೇಶದಿಂದ "ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು" ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾಪಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಅಕಾಡೆಮಿಯ ಕೇಂದ್ರಸ್ಥಾನ "ಮಡಿಕೇರಿ" ಯಾಗಿರುತ್ತದೆ.

ಈ ಅರೆಭಾಷೆ ಅಕಾಡೆಮಿಗೆ ಸಂಬಂಧಿಸಿದ ರೂಪುರೇಷೆ ಅಂಗರಚನೆ ಹುದ್ದೆಗಳ ವಿವರ ಇತ್ಯಾದಿಗಳ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ವಿ.ರಾಮಚಂದ್ರರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ.

ಪಿ.ಆರ್.89

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ ಮಡಿಕೇರಿ, ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ ಮಡಿಕೇರಿ ಮತ್ತು ಶ್ರೀ ನರಸಿಂಹಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್ ಇವರುಗಳು ಎಸಗಿದ ಕರ್ತವ್ಯ ಲೋಪದ ಕುರಿತು ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ರವರ ಪತ್ರ ಸಂಖ್ಯೆ:ಸಿ2/ಡಬ್ಲ್ಯೂಎಲ್/ಸಿಆರ್-54/2011-12, ದಿನಾಂಕ:23-12-2011.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ ಓದಲಾದ ದಿನಾಂಕ:23-12-2011ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರು ರವರು ಮಡಿಕೇರಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರೊಂದಿಗೆ ಮಡಿಕೇರಿ ವಿಭಾಗದ ನಂ. 24, ಬ್ರಹ್ಮಗಿರಿ ಪಕ್ಷಿಧಾಮ ಮತ್ತು ಮಾಕುಟ್ ವನ್ಯಜೀವಿ ವಿಭಾಗವನ್ನು ಖುದ್ದು ತನಿಖೆ ಮಾಡಲಾಗಿ ಸದರಿ ವಿಭಾಗಕ್ಕೆ ಹೊಂದಿಕೊಂಡ ಹಸಿರು ಕಾಡಿನಲ್ಲಿ ಗಾಂಜಾ ಬೆಳೆಯನ್ನು ಬೆಳೆಯುತ್ತಿದ್ದು, ಈ ರೀತಿ ಅಕ್ರಮವಾಗಿ ಗಾಂಜಾ ಬೆಳೆಯನ್ನು ಬೆಳೆಯುವಲ್ಲಿ ಸದರಿ ವಿಭಾಗದ ಅರಣ್ಯ ಇಲಾಖೆಯ ಕಳ್ಳಬೇಟೆ ತಡೆಯುವ ಕ್ಯಾಂಪ್‌ನವರು ಗಾಂಜಾ ಬೆಳೆಯಲು ಕಾಫಿ ಎಸ್ಟೇಟ್ ಮಾಲೀಕರೊಂದಿಗೆ ಶಾಮೀಲಾಗಿ ಅರಣ್ಯ ವಿಭಾಗ 3 ಎಕರೆ ಪ್ರದೇಶದಲ್ಲಿ ಬೆಳೆದಿದ್ದಂತಹ ಮರಗಳನ್ನು, ಸಸಿಗಳನ್ನು ನಾಶ ಮಾಡಿರುವುದು ಕಂಡು ಬಂದಿರುತ್ತದೆ. ಈ ರೀತಿ ನಾಶ ಮಾಡಿದ ಬ್ರಹ್ಮಗಿರಿ ಪಕ್ಷಿಧಾಮದ ನಿತ್ಯ ಹರಿದ್ವರ್ಣದ ಕಾಡಾಗಿದ್ದು, ಇದು ತಡಸಾಲ್, ನಂದಿ, ತಾರೆ, ಕಿರಲ್‌ಬೊಗಿ, ಮಾವು, ನೇರಲು ಮತ್ತು ಇತ್ಯಾದಿ ಅತ್ಯಂತ ಬೆಲೆಬಾಳುವ ಜಾತಿಯ ಮರಗಳಾಗಿರುತ್ತವೆ. ಈ ರೀತಿ ನಾಶಪಡಿಸಿದ ಕಡಿತದಂತಹ ಮರಗಳು 80 ಸೆಂಟಿ‌ರ್ ಅಳತೆಯುಳ್ಳ ಮರಗಳಾಗಿರುತ್ತವೆ. ಇದಲ್ಲದೆ, ಆ ಪ್ರದೇಶದಲ್ಲಿ ಕೆಲವೊಂದು ವಿಶೇಷ ಜಾತಿಯ ಗಿಡ ಮರಗಳನ್ನು ನಾಶಪಡಿಸಿರುವುದಾಗಿದೆ. ಹಾಗೇ ನಾಶಪಡಿಸಿದಂತಹ ಸದರಿ ಪ್ರದೇಶದಲ್ಲಿ ಗಾಂಜಾ ಸಸಿಗಳನ್ನು ಬೆಳೆಯಲಾಗಿದೆ. ಈ ಕೃತ್ಯದ ಬಗ್ಗೆ ಮಡಿಕೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಯವರು ದಿನಾಂಕ:21-11-2011ರಂದು ತಪಾಸಣೆ ಮಾಡಿರುತ್ತಾರೆ. ಈ ಬಗ್ಗೆ ಗೋಣಿಕುಪ್ಪ, ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿತ್ತು. ಇಬ್ಬರು ಅರಣ್ಯ ವೀಕ್ಷಕರನ್ನು ಅಭಿರಕ್ಷೆಗೆ ತೆಗೆದುಕೊಳ್ಳಲಾಗಿದೆ. ಈ ರೀತಿ ನಿತ್ಯ ಹರಿದ್ವರ್ಣದ ಜೀವಿ ವೈವಿಧ್ಯದ ಕಾಡನ್ನು ನಾಶಪಡಿಸಿ ಅದರಲ್ಲಿ ಗಾಂಜಾ ಬೆಳೆಯನ್ನು ಬಹುಶಃ ಮುಂಗಾರು ಸಮಯದಲ್ಲಿ ಬೆಳೆಯುತ್ತಾರೆ. ಈ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮಡಿಕೇರಿ ರವರ ಕಛೇರಿಯ ದಾಖಲೆಗಳಲ್ಲಿ ಕುಟ್ಟಂಡಿ ಗ್ರಾಮಸ್ಥರು ದೂರನ್ನು ನೀಡಿದ್ದು ಮತ್ತು ಈ ದೂರಿನ ಪ್ರತಿಯನ್ನು ವಲಯ ಅರಣ್ಯಾಧಿಕಾರಿ (ವನ್ಯಜೀವಿ), ಮಾಕುಟ್ ಹಾಗೂ ಮಡಿಕೇರಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ಕಳುಹಿಸಿರುತ್ತಾರೆ. ಸದರಿ ದೂರಿನ ಪ್ರತಿಯನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಮಡಿಕೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೂ ಹಾಗೂ ಆ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ತನಿಖೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಕಳುಹಿಸಿರುತ್ತಾರೆ. ಆದರೆ, ಸದರಿ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಳ್ಳದೆ ತಟಸ್ಥರಾಗಿ ಉಳಿದಿರುತ್ತಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ, ಇಡೀ ವ್ಯವಸ್ಥೆಯು ಕುಸಿತವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ವಲಯ ಅರಣ್ಯಾಧಿಕಾರಿ ಮತ್ತು ವನಪಾಲಕ ಇವರುಗಳು ನಿಯತವಾಗಿ ಅರಣ್ಯ ಪ್ರದೇಶವನ್ನು ಉಸ್ತುವಾರಿ ಮಾಡಿ ಮತ್ತು ಸಕಾಲಿಕವಾಗಿ ಗಸ್ತು ವ್ಯವಸ್ಥೆಯನ್ನು ಕೈಗೊಂಡಿದ್ದರೆ, ಈ ಅಕೃತ್ಯವು ನಡೆಯುತ್ತಿರಲಿಲ್ಲ. ಆದ್ದರಿಂದ, ಸದರಿ ಪ್ರದೇಶದ ಅರಣ್ಯವು ನಾಶವಾಗಲು ಈ ಕೆಳಕಂಡ ಅಧಿಕಾರಿಗಳು ಕಾರಣರಾಗಿರುವುದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರು ರವರ ಸ್ಥಳ ತನಿಖೆಯಿಂದ ಕಂಡು ಬಂದಿರುತ್ತದೆ.

1. ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ, ವಿಭಾಗ ಮಡಿಕೇರಿ.
2. ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ.
3. ಶ್ರೀ ನರಸಿಂಹ ಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್.
4. ಶ್ರೀ ರಾಕೇಶ್ ಸೋಲಾಪುರ್, ವನಪಾಲಕ, ಸೊಳ್ಳೆಕೊಳ್ಳಿ, ವಿಭಾಗ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಯವರ ವರದಿಯು ವಾಸ್ತವಾಂಶಗಳಿಂದ ಕೂಡಿದ್ದು, ಸತ್ಯಯುತವಾಗಿರುತ್ತದೆ. ಇದರಿಂದ, ಈ ಮೇಲೆ ಹೇಳಿದ ಅಧಿಕಾರಿ/ನೌಕರರುಗಳು ತಮ್ಮ ಕರ್ತವ್ಯ ಪಾಲನೆಯಲ್ಲಿ ಅತೀವ ಕರ್ತವ್ಯ ನಿರ್ಲಕ್ಷ್ಯತೆ ತೋರಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬಂದಿರುವುದರಿಂದ, ಅವರುಗಳು ಎಸಗಿದ ಕರ್ತವ್ಯ ನಿರ್ಲಕ್ಷ್ಯತೆಗಾಗಿ ಅವರುಗಳನ್ನು ಅಮಾನತ್ತಿನಲ್ಲಿಡಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಅಪಜೀ 122 ಅಇವಿ 2011, ಬೆಂಗಳೂರು, ದಿನಾಂಕ: 24 ನೇ ಡಿಸೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ರಾಕೇಶ್ ಸೊಲಾಪುರ್ ವನಪಾಲಕ, ಸೊಳ್ಳೆಕೊಳ್ಳಿ, ವಿಭಾಗ ಇವರನ್ನು ಈಗಾಗಲೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಅಮಾನತ್ತುಗೊಳಿಸಿರುವುದರಿಂದ, ಈ ಕೆಳಗೆ ಹೇಳಲಾಗಿರುವ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸದೇ ಅರಣ್ಯ ಸಂಪತ್ತನ್ನು ನಾಶವಾಗಲು ಕಾರಣವಾಗಿರುವುದು ಸ್ಪಷ್ಟವಾಗಿ ಕಂಡು ಬರುವುದರಿಂದ ಮತ್ತು ಆ ಸಂಬಂಧ ಎಸಗಿದ ತೀವ್ರ ದುರ್ನಡತೆ ಮತ್ತು ಕರ್ತವ್ಯ ಲೋಪಗಳಿಗಾಗಿ ಅವರುಗಳನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ-10 (1)(d)ರನ್ವಯ ಪ್ರದತ್ತವಾದ ಅಧಿಕಾರವನ್ನು ಸರ್ಕಾರವು ಚಲಾಯಿಸಿ, ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಈ ಕೆಳಕಂಡ 3 ಜನ ಅಧಿಕಾರಿಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

1. ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ.
2. ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ.
3. ಶ್ರೀ ನರಸಿಂಹ ಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಗಳು ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಟ್ಟು ತೆರಳಕೂಡದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಎಸ್. ಗುರುಸಿದ್ದಯ್ಯ

ಸರ್ಕಾರದ ಉಪ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್.90

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

**ವಿಷಯ :** ಕೊಳ್ಳೇಗಾಲ ಪ್ರಾದೇಶಿಕ ವಿಭಾಗದ ಗುಂಡ್ಲುಪೇಟೆ ಪ್ರಾದೇಶಿಕ ವಲಯದ ಕೆಲವು ಅರಣ್ಯ ಪ್ರದೇಶವನ್ನು ಬಂಡೀಪುರ ಹುಲಿ ಯೋಜನೆ ವಿಭಾಗಕ್ಕೆ ವರ್ಗಾಯಿಸುವ ಕುರಿತು.

**ಓದಲಾಗಿದೆ:** 1. ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:15-04-2011ರಂದು ಜರುಗಿದ ಸಭಾ ನಡವಳಿಗಳು.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ:ಎ1/ಇಎಸ್‌ಟಿ/ಸಿ.ಆರ್.-04/2011-1, ದಿನಾಂಕ:07-05-2011.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳಲ್ಲಿ ಈ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಗಿತ್ತು.

"Transfer of Forest Areas presently under the administrative control of Gundlupet Territorial Range, Kollegal Forest Division in the notified Buffer Zone of the Bandipur Tiger Reserve:-

The Chief Conservator of Forests (Project Tiger) Mysore brought to the kind notice of the Principal Secretary to Government, forest, Ecology & Environment Department about the necessity of addressing this issue at the earliest. The guidelines issued by the National Tiger Conservation Authority prescribe that

"5.5.2 The Buffer one should be notified as required under the Wildlife (Protection) Amendment Act, 2006 and should be placed under the unified control of the Field Director of the Tiger Reserve."

The Buffer Zone notification of Bandipur Tiger reserve being in place since 31-08-2010 and in view of the undesired development activities such as Housing and Tourism Projects in the Kaniyanapura Elephant Corridor requires that the Seven Forest blocks over an extent of 5049.608 hectares presently under the control of Gundlupet Territorial Range, Kollegal Forest Division be transferred along with the posts and the personnel to the Bandipur Tiger Reserve of effective manangement of the Buffer Eco-sensitive zone. After due deliberation, it was agreed to effect the transfer of forest arreas along with the posts and personnel.

ಕೊಳ್ಳೇಗಾಲ ಪ್ರಾದೇಶಿಕ ವಿಭಾಗದ ಅಧೀನದಲ್ಲಿರುವ ಗುಂಡ್ಲುಪೇಟೆ ಪ್ರಾದೇಶಿಕ ವಲಯದ ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶಗಳಲ್ಲಿ ಉದ್ಭವಿಸುವಂತಹ ಒತ್ತುವರಿ ಪ್ರಕರಣಗಳು, ವನ್ಯಜೀವಿ ಹತ್ಯೆ, ಅಕ್ರಮ ಕಡಿತಲೆ, ಮರಗಳ ಮತ್ತು ಪ್ರಾಣಿಗಳ ಅಕ್ರಮ ಸಾಗಾಣಿಕೆ ಮತ್ತು ಆಗಿಂದಾಗ್ಗೆ ಉಂಟಾಗುವ ಕಾಡಾನೆಗಳ ಸಾವು ಹಾಗೂ ಇನ್ನು ಮುಂತಾದ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ, ಇಲಾಖಾ ಅಧಿಕಾರಿಗಳು, ಸಾರ್ವಜನಿಕರು, ಗುಂಡ್ಲುಪೇಟೆ ವಿಭಾಗದಿಂದ ಕೊಳ್ಳೇಗಾಲಕ್ಕೆ ಪ್ರಯಾಣಿಸಬೇಕಾಗಿರುವುದರಿಂದ ಹಾಗೆಯೇ ಇಲಾಖಾ ಕಾಮಗಾರಿಗಳ ವೀಕ್ಷಣೆ ಹಾಗೂ ಇನ್ನಿತರ ಆಡಳಿತಾತ್ಮಕ ಉದ್ದೇಶಕ್ಕೆ ಕೊಳ್ಳೇಗಾಲದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೂರದ ಗುಂಡ್ಲುಪೇಟೆಗೆ ಭೇಟಿ ನೀಡಬೇಕಾಗಿದ್ದು, ಕೆಲವು ತುರ್ತು ಮತ್ತು ಜ್ವಲಂತ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲಾಗದಿರುವ ಪರಿಸ್ಥಿತಿಯು ಉಂಟಾಗಿದ್ದು ಈ ಎಲ್ಲಾ ಅನಾನುಕೂಲತೆಗಳಿಂದ ಹೊರಬಂದು ಸರಳವಾಗಿ ಕಾರ್ಯನಿರ್ವಹಿಸಲು ಮತ್ತು ಆಡಳಿತ ದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದಲೂ ಸಹ ಗುಂಡ್ಲುಪೇಟೆ ಪ್ರಾದೇಶಿಕ ವಲಯದ ಪೂರ್ಣ ಅರಣ್ಯ ಪ್ರದೇಶವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಲಿಯೋಜನೆ ವಿಭಾಗ, ಬಂಡೀಪುರ ಇವರ ಆಡಳಿತ ನಿಯಂತ್ರಣಕ್ಕೆ ಒಳಪಡಿಸಿ ಆಡಳಿತ ನಿರ್ವಹಣೆಯನ್ನು ಸರಳವಾಗಿಸುವ ಪ್ರಯುಕ್ತ ಗುಂಡ್ಲುಪೇಟೆ ಪ್ರಾದೇಶಿಕ ವಲಯಕ್ಕೆ ಮಂಜೂರಾದಂತಹ ಈ ಕೆಳಕಂಡ ಅರಣ್ಯ ಪ್ರದೇಶವನ್ನು ಸಿಬ್ಬಂದಿಗಳ ಜೊತೆಗೆ ಮತ್ತು ಕಛೇರಿ, ಕಟ್ಟಡ, ವಾಹನ ಇತ್ಯಾದಿಗಳನ್ನು ಎಲ್ಲಾ ಮೂಲ ಸೌಕರ್ಯಗಳನ್ನು ಹುಲಿಯೋಜನೆ ವಿಭಾಗ, ಬಂಡೀಪುರ ಇವರ ವ್ಯಾಪ್ತಿಗೆ ಒಳಪಡಿಸಲು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಿಬ್ಬಂದಿಗಳ ವಿವರ

| ಕ್ರ.ಸಂ. | ಹುದ್ದೆಗಳ ವಿವರ | ಮಂಜೂರಾದ ಹುದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ವಲಯ ಅರಣ್ಯ ಅಧಿಕಾರಿ | 1 | 1 | – |
| 2 | ವನಪಾಲಕರು | 3 | 3 | – |
| 3 | ದ್ವಿತೀಯ ದರ್ಜೆ ಸಹಾಯಕರು | 1 | 1 | – |
| 4 | ವಾಹನ ಚಾಲಕರು | 1 | 1 | – |
| 5 | ಅರಣ್ಯ ರಕ್ಷಕರು | 11 | 6 | 5 |
| 6 | ಅರಣ್ಯ ವೀಕ್ಷಕರು | 3 | 2 | 1 |
| 7 | ಗ್ರೂಪ್ 'ಡಿ' ನೌಕರರು | 2 | 2 | – |
| 8 | ಸಂಖ್ಯಾರಿಕ ನೌಕರರು | 7 | 7 | – |
| ಒಟ್ಟು | | **29** | **23** | **06** |

ಮುಂದುವರೆದು, ಈ ಮೇಲಿನ ಸಿಬ್ಬಂದಿಯನ್ನು ಸ್ಥಳಾಂತರಿಸುವುದರೊಂದಿಗೆ ಹುಲಿಯೋಜನೆ ವಿಭಾಗದ ಹುಲಿ ಸಂರಕ್ಷಿತ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಸರ್ಕಾರವು ಘೋಷಿಸಿರುವುದರಿಂದ ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡ ನಿರ್ಣಯದಂತೆ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡ ಬಫರ್ ಜೋನಿನ ಗುಂಡ್ಲುಪೇಟೆ ಪ್ರಾದೇಶಿಕ ವಲಯದ ವ್ಯಾಪ್ತಿಯಲ್ಲಿರುವ 5049.608 ಹೆಕ್ಟೇರ್ ಅರಣ್ಯ ಪ್ರದೇಶದ ಈ ಕೆಳಕಂಡ 7 ಅರಣ್ಯ ಬ್ಲಾಕ್‌ಗಳನ್ನು ಗುಂಡ್ಲುಪೇಟೆ ವಲಯ, ಕೊಳ್ಳೇಗಾಲ ಪ್ರಾದೇಶಿಕ ವಿಭಾಗದಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಲಿಯೋಜನೆ ವಿಭಾಗ, ಬಂಡೀಪುರ ಇವರ ವ್ಯಾಪ್ತಿಗೆ ಮತ್ತು ನಿಯಂತ್ರಣಕ್ಕೆ ತರಲು ಸೂಕ್ತ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

**ಅರಣ್ಯ ಪ್ರದೇಶದ ವಿಸ್ತೀರ್ಣದ ವಿವರ (ಹೆಕ್ಟೇರ್‌ಗಳಲ್ಲಿ)**

| ಕ್ರ.ಸಂ. | ಮೀಸಲು ಅರಣ್ಯ ಪ್ರದೇಶಗಳು | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ |
|---|---|---|
| 1 | ಲೊಕ್ಕೆರೆ ಸ್ಟೇಟ್ ಫಾರೆಸ್ಟ್ | 839.820 |
| 2 | ಸೋಮನಾಥಪುರ ಶ್ರೀಗಂಧ ಮೀಸಲು ಅರಣ್ಯ | 819.800 |
| 3 | ನೆನೆಕಟ್ಟ ಮೀಸಲು ಅರಣ್ಯ | 576.680 |
| 4 | ಭೀಮನಬೀಡು ಸ್ಟೇಟ್ ಫಾರೆಸ್ಟ್ | 367.460 |
| 5 | ದೇಶಿಪುರ ಮೀಸಲು ಅರಣ್ಯ | 389.550 |
| 6 | ಹೆಗ್ಗವಾಡಿ ಬ್ಲಾಕ್– II ಸ್ಟೇಟ್ ಫಾರೆಸ್ಟ್ | 894.858 |
| 7 | ಹೆಗ್ಗವಾಡಿ ಬ್ಲಾಕ್ – I ಸ್ಟೇಟ್ ಫಾರೆಸ್ಟ್ | 1161.440 |
| ಒಟ್ಟು | | **5049.608** |

ಈ ಮೇಲೆ ವಿವರಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಲಾಗಿ ಗುಂಡ್ಲುಪೇಟೆ ಪ್ರಾದೇಶಿಕ ವಲಯದ 7 ಬ್ಲಾಕ್ ಅರಣ್ಯ ಪ್ರದೇಶವನ್ನು ಸಿಬ್ಬಂದಿ ಮತ್ತು ಇತರೇ ಮೂಲ ಎಲ್ಲಾ ಸೌಕರ್ಯಗಳನ್ನು ಹುಲಿ ಯೋಜನೆ ವಿಭಾಗ, ಬಂಡೀಪುರ ಇದರ ವ್ಯಾಪ್ತಿಗೆ ಒಳಪಡಿಸಿ ಈ ಪ್ರದೇಶವನ್ನು ವಲಯ ಅರಣ್ಯ ಅಧಿಕಾರಿ ಗುಂಡ್ಲುಪೇಟೆ ಬಫರ್ ಜೋನ್ ವಲಯವೆಂದು ಪದನಾಮೀಕರಿಸುವ ಪ್ರಸ್ತಾವನೆಯು ಸದುದ್ದೇಶದಿಂದ ಹಾಗೂ ಆಡಳಿತದ ಹಿತದೃಷ್ಟಿಯಿಂದ ಕೂಡಿರುವುದರಿಂದ, ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಅಪಜೀ 166 ಅಅಸೇ 2011, ಬೆಂಗಳೂರು, ದಿನಾಂಕ: 27ನೇ ಡಿಸೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಸಂದರ್ಭಗಳ ಹಿನ್ನೆಲೆಯಲ್ಲಿ ಕೊಳ್ಳೇಗಾಲ ಪ್ರಾದೇಶಿಕ ವಿಭಾಗದ ಅಧೀನದಲ್ಲಿರುವ ಗುಂಡ್ಲುಪೇಟೆ ಪ್ರಾದೇಶಿಕ ವಲಯದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಅರಣ್ಯ ಪ್ರದೇಶಗಳನ್ನು ಸಿಬ್ಬಂದಿ ಮತ್ತು ಎಲ್ಲಾ ಮೂಲ ಸೌಕರ್ಯಗಳೊಂದಿಗೆ, ಹುಲಿ ಯೋಜನೆ ವಿಭಾಗ, ಬಂಡೀಪುರ ಇದರ ಆಡಳಿತ ವ್ಯಾಪ್ತಿಗೆ ಒಳಪಡಿಸಿ, ಈ ಪ್ರದೇಶವನ್ನು ವಲಯ ಅರಣ್ಯ ಅಧಿಕಾರಿ ಗುಂಡ್ಲುಪೇಟೆ ಬಫರ್ ಜೋನ್ ವಲಯವೆಂದು ಪದನಾಮೀಕರಿಸಿ ಆದೇಶಿಸಿದೆ.

ಸಿಬ್ಬಂದಿಗಳ ವಿವರ

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ವಲಯ ಅರಣ್ಯ ಅಧಿಕಾರಿ | 1 | 1 | – |
| 2 | ವನಪಾಲಕರು | 3 | 3 | – |
| 3 | ದ್ವಿತೀಯ ದರ್ಜೆ ಸಹಾಯಕರು | 1 | 1 | – |
| 4 | ವಾಹನ ಚಾಲಕರು | 1 | 1 | – |
| 5 | ಅರಣ್ಯ ರಕ್ಷಕರು | 11 | 6 | 5 |
| 6 | ಅರಣ್ಯ ವೀಕ್ಷಕರು | 3 | 2 | 1 |
| 7 | ಗ್ರೂಪ್ 'ಡಿ' ನೌಕರರು | 2 | 2 | – |
| 8 | ಸಂಖ್ಯಾರಿಕ ನೌಕರರು | 7 | 7 | – |
| ಒಟ್ಟು | | **29** | **23** | **06** |

ಅರಣ್ಯ ಪ್ರದೇಶದ ವಿಸ್ತೀರ್ಣದ ವಿವರ (ಹೆಕ್ಟೇರ್‌ಗಳಲ್ಲಿ)

| ಕ್ರಮ ಸಂಖ್ಯೆ | ಮೀಸಲು ಅರಣ್ಯ ಪ್ರದೇಶಗಳು | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ |
|---|---|---|
| 1 | ಬೊಕ್ಕೆರೆ ಸ್ಟೇಟ್ ಫಾರೆಸ್ಟ್ | 839.820 |
| 2 | ಸೋಮನಾಥಪುರ ಶ್ರೀಗಂಧ ಮೀಸಲು ಅರಣ್ಯ | 819.800 |
| 3 | ನೆಸೆಕಟ ಮೀಸಲು ಅರಣ್ಯ | 576.680 |
| 4 | ಭೀಮನಬೀಡು ಸ್ಟೇಟ್ ಫಾರೆಸ್ಟ್ | 367.460 |
| 5 | ದೇಶಿಪುರ ಮೀಸಲು ಅರಣ್ಯ | 389.550 |
| 6 | ಹೆಗ್ಗವಾಡಿ ಬ್ಲಾಕ್– II ಸ್ಟೇಟ್ ಫಾರೆಸ್ಟ್ | 894.858 |
| 7 | ಹೆಗ್ಗವಾಡಿ ಬ್ಲಾಕ್ – I ಸ್ಟೇಟ್ ಫಾರೆಸ್ಟ್ | 1161.440 |
| | ಒಟ್ಟು | **5049.608** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್.91

## INFRASTRUCTURE DEVELOPMENT SECRETARIAT

**Sub :** Advisory services – Preparation of State Perspective Civil Aviation Plan – Payment of fees to iDeCK-reg

**Read :** 1. D.O.No. AV-20036/2/2011-AAI Dated March 10, 2011, Secretary, Ministry of Civil Aviation, Government of India.

2. Government Letter No. IDD 51 DIA 2011, Dated:19-8-2011

3. Letter No. iDeck/2011-12/901, Dated:20-9-2011.

**Preamble:**

In the letter read at (1) above, MoCA had stated that in order to ensure that the efforts by the respective State Governments for the development of Civil Aviation Sector, is done in a planned manner over a horizon of next ten years or so, State Governments have to prepare a 'State Perspective Civil Aviation Plan' State Governments can prepare this plan through their Government agencies or by engaging experts at their discretion. It had also requested to prepare the said plan preferably within next three months, in consultation with all stake holders, and share the same with the Ministry of Civil Aviation

2. In the letter read at (2) above, iDeck was entrusted with the task of preparation of State Perspective Civil Aviation Plan for furnishing of the same to the Ministry of Civil Aviation, Government of India.

3. In the lette read at (3) above, The Chief Financial Officer has enclosed invoice for the payment of Rs.99,600/- being the 20% of fee payable and Rs.2,98,800/- on submission of preliminary plan and completion of Draft State Perspective Civil Aviation Plan.

4. The matter has been examined in detail and hence the following order.

**Government Order No. IDD 51 DIA 2011, Bangalore, Dated: 28th December 2011.**

Under the circumstances explained in the preamble, Sanction is accorded for release of Rs.3,98,400/- (Rupees Three lakhs ninety-eight thousand four hundred only) towards fees payable to iDeck for Preparation of the draft State Perspective Civil Aviation Plan.

2. This amount shall be met under the Head of Account 3451-00-090-1-06-059-Infrastructure Preliminary Studies Other Expenditure – out of the provision of Rs.300.00 lakhs. The Chief Financial Officer, and Company Secretary, iDeck is authorized to draw the above amount on a payees receipt duly countersigned by the Under Secretary to Government, Infrastructure Development, Bangalore.

3. This order issues in accordance with the financial powers delegated to Principal Secretaries/Secretaries to Government vide G.O. No. FD 1 TFP 2008, dated 16-05-2008.

By Order and in the name of the Governor of Karnataka,

**S.J. SAMPATH KUMAR**

Under Secretary to Government,

Infrastructure Development Department

PR.92

## COMMERCE AND INDUSTRIES SECRETARIAT

**Sub :** Transfer of approval granted earlier to M/s Karnataka Power Corporation Ltd in favour of M/s Raichur Power Corporation Ltd. for establishment of 1600 MW Power Plant in Raichur Growth Center.

**Read :**
1. G.O. No. CI 132 SPI 2008, Dated : 15-3-2008.
2. G.O. No. CI 46 SPI 2009, Dated : 28-5-2009.
3. G.O. No. EN 90 PPC 2008, Dated : 3-1-2009.
4. Letter of KPCL No. A1L1 YTPS/Lay. Dated Aug 6, 2011.

**Preamble :**

Government has approved the proposal of M/s Karnataka Power Corporation Ltd to establish a 1000 MW coal based thermal power station in 1000 acres of land at Raichur Growth Centre vide the GO read above at (1).

Government also approved the proposal of M/s Karnataka Power Corporation Ltd to increase the capacity of the thermal power station to 1600 MW vide the GO read above at (2) and allotted additional 234.22 acres of land.

Energy Department as ordered to establish this 1600 MW thermal power station through a special purpose vehicle in the name of Raichur Power Corporation Ltd vide the GO read above at (3).

Managing Director KPCL has requested C & I Department to transfer the above approvals in favour of M/s Raichur Power Corporation Ltd vide his letter dated Aug 6, 2011.

Government has examined the proposal in all aspects. Hence this order.

**GOVERNMENT ORDER NO. CI 238 SPI 2011, BANGALORE, DATED 28-12-2011.**

Government is pleased to transfer the approval granted earlier to M/s Karnataka Power Corporation Ltd in favour of M/s Raichur Power Corporation Ltd. for establishment of 1600 MW Power Plant in Raichur Growth Center approved vide GOs read above at (1) and (2),

The other terms and conditions of the Govt. Order read above at (1) and (2) remain the same.

By Order and in the name of the Governor of Karnataka,

**SHIVASHANKAR NAIK. L**

Desk Officer (Technical Cell) (I/c)

P.R.93 Commerce & Industries Department.

## COMMERCE AND INDUSTRIES SECRETARIAT

**Sub :** Reimbursement of VAT paid on the sale of metro coaches by M/s BEML Ltd. to Bangalore Metro Rail Corporation Ltd.,-Reg.

**Read :** 1. G.O. No. FD 37 CSL 2008, Dated : 7-10-2009.

**Preamble :**

In the Govt. Order read at (1) above, sanction was accorded for reimbursement of tax paid under the KVAT Act by BEML, on its sale of Metro coaches to Bangalore Metro Rail Corporation Ltd.

The proposal was sent to FD for release fo Rs. 15,58,22,292/- for reimbursement of Central sales tax paid by BEML from March 2011 to August 2011.

FD has permitted to release the eligible amount subject to availability of budget under the scheme.

**GOVERNMENT ORDER NO. CI 237 SPI 2011, BANGALORE, DATED 16-12-2011.**

For the reasons explained above, sanction is hereby accorded for the release of Rs. 15,58,22,292/- (Rs. Fifteen crores Fifty eight lakhs twenty two Thousand two Hundred and Ninety two only) under the Head of A/c "2852-80-800-0-43" (Plan) 059-other expenses towards reimbursement of sales tax to BEML for the months of March 2011 to August 2011.

The Asst. General Manager (Finance & Accouts), Bangalore Complex, BEML Ltd., is authorized to draw the amount on payee's receipt duly countersigned by Commissioner for Industrial Development and Director of Industries and Commerce Dept.

This order is issued with reference to Finance Department's Note No. FD 1731 Exp-I/2011 dated : 7-12-2011.

By Order and in the name of the Governor of Karnataka,

**JYOTHI R.J.**

Desk Officer (Technical Cell)

P.R.94 Commerce & Industries Department.

## COMMERCE AND INDUSTRIES SECRETARIAT

**Sub :** Reimbursement of Central Sales Tax paid on inter-state sale of metro coaches by M/s BEML Ltd. to Delhi Metro Rail Corporation-Reg.

**Read :**
1. G.O. No. FD 283 CSL 2009, Dated : 8-12-2009.
2. G.O. No. CI 430 SPI 2010, dated : 21-11-2011.

**Preamble :**

In the Govt. Order read at (1) above, sanction was accorded for reimbursement of tax paid under the Central Sales Tax Act, 1956 by BEML, on its Inter-State sale of Metro coaches to Delhi Metro Rail Corporation.

In the G.O. read at (2) above Rs. 2.24 crore was released towards the sales made to DMRC up to March 2011 as per the concurrence of F.D.

The proposal was sent to FD for release of Rs. 7,23,09,622/- for reimbursement of Central sales tax paid by BEML from September 2010 to December 2010. FD has permitted C & I Dept., to release the amount as per eligibility and subject to availability of funds under the budget head.

Hence the order.

**GOVERNMENT ORDER NO. CI 430 SPI 2010, BANGALORE, DATED 16-12-2011.**

For the reasons explained above, sanction is hereby accorded for the release of Rs. 7,23,09,622/- (Rs. Seven crores Twenty three lakhs nine Thousand Six Hundred and twenty two only) under the Head of A/c "2852-80-800-0-43" (Plan) 059-other expenses towards reimbursement of sales tax to BEML for the months of September 2010 to December 2010..

The Deputy General Manager (Finance & Accounts), Bangalore Complex, BEML Ltd., is authorized to draw the amount on payee's receipt duly countersigned by Commissioner for Industrial Development and Director of Industries and Commerce Dept.

This order is issued with reference to Finance Department's Ńote No. FD 1731 Exp-I/2011 dated : 7-12-2011.

By Order and in the name of the Governor of Karnataka,
JYOTHI R.J.
Desk Officer (Technical Cell)
Commerce & Industries Department.

P.R.95

## COMMERCE AND INDUSTRIES SECRETARIAT

**Sub :** Approval to the Project Proposal of M/s. Minera Steel and Power Pvt. Ltd., Bellary for enhancement of power generation capacity from 15 MW to 35 MW at Yerabanahalli Village, Sandur Taluk, Bellary District.

**Read :**
1. Government Order dated : 13-5-2008.
2. Government Order dated : 12-9-2011.
3. Proceedings of the 26th State High Level Clearance Committee (SHLCC) Meeting held on 9-11-2011.

**Preamble :**

The project proposal of M/s. KMMI Steel Pvt. Ltd., Bellary to establish "1.5 lakh TPA Mini Steel Plant with 15MW Power Plant" with an investment of Rs. 212.10 crores at Yerabanahalli village, Sandur Taluk, Bellary District was approved by the 14th SHLCC meeting held on 17-3-2008. Accordingly G.O. was issued on 13-5-2008.

In the 24th (24-1-2011) and 25th SHLCC Meetings (14-07-2011) the Committee considered respectively the request for extension of time upto 11-3-2011 and change of name from M/s KMMI steel Pvt. Ltd to M/s Minera Steel and Power Pvt. Ltd.

The SHLCC approved the investment proposal of the company for enhancement of power generation capacity from 15 MW to 35 MW with an additional investment of Rs. 78.29 crores. Government has examined the recommendations made by the 26th State High Level Clearance Committee Meeting held on 9-11-2011, in all aspects.

Hence the following order.

**GOVERNMENT ORDER NO. CI 230 SPI 2011, BANGALORE, DATED 28-12-2011.**

Government is pleased to accord in principle approval to the Project Proposal of M/s. KMMI Steel Pvt. Ltd, Bellary for enhancement of power generation capacity for the project approved vide G.O. dated 13-5-2008 referred to at (1) above from 15 MW to 35 MW with an additional investment of Rs. 78.29 Crore and extend to following infrastructure facilities, incentives and concessions.

**INFRASTRUCTURE FACILITIES :**

1. **Land :** Existing land at Yerabanahalli Village, Sandur Taluk, Bellary District will be utilized.
2. **Water :** The required water will be met out of existing allocation.
3. **Power :** The required power will be met out of captive generation.
4. **Incentive & Concessions** As per applicable Tourism Policy of the State.

**GENERAL TERMS AND CONDITIONS :**

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring

Social Infrastructure Development : The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

Others :

i) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.

ii) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

**SHIVASHANKAR NAIK, L.**

Desk Officer (Technical Cell)(I/c)

Commerce & Industries Department.

P.R.96

## COMMERCE AND INDUSTRIES SECRETARIAT

**Sub :** Approval to the Project Proposal of M/s. Triveni Engineering and Industries Ltd., to establish "High Pressure Steam Turbine Manufacturing Unit".

**Read :**
1. Government Order No. CI 70 SPI 2011, dated 23-2-2011.
2. Government Order No. CI 70 SPI 2011, dated 27-8-2011.
3. Proceedings of the 26th State High Level Clearance Committee (SHLCC) Meeting held on 9-11-2011.

**Preamble :**

Project proposal of M/s Triveni Engineering and Industries Ltd., 12-A, Peenya Industrial Area, Bangalore-560058 to establish a "High Pressure Steam Turbine Manufacturing unit", with an investment of Rs. 250.00 crores, in 40 acres of land in 4th Phase, Dobbaspet Industrial Area, Bangalore Rural District, was approved in the 24th SHLCC meeting held on 24-1-2011. The Government Order conveying the approval was issued on 23-2-2011.

Subsequently, in the 25th SHLCC meeting Committee approved the request of the company for change of location from 4th Phase, Dobbaspet Industrial Area to 2nd Phase, Sompura Industrial Area and transfer of approval from M/s Triveni Engineering and Industries Ltd. to M/s Triveni Turbine Ltd.

The company vide letter dated 6-9-2011 has submitted that 2nd Phase, Sompura Industrial Area is yet to be developed. But with their existing facilities at 1st Phase, Peenya Industrial Area, Bangalore they are finding it difficult to expand the manufacturing facilities due to space constraint.

As advised in the 166th Screening Committee meeting, company officials visited the site along with the Development Officer, KIADB. The company now requesting for allotment of undeveloped land at Sy. Nos. 19,21 (part), 24, 25, 26, 27, 28 and 29 of Beergondanhalli Village and 29 (Part). In the absence of undeveloped land, the project proponent requested for allotment of developed land in 2nd Phase, Sompura Industrial Area.

**GOVERNMENT ORDER NO. CI 70 SPI 2011, BANGALORE, DATED 16-12-2011.**

Government is pleased to approve the following ; with regard to investment proposals of M/s Triveni Turbine Ltd., to establish a high pressure Steam Turbine Manufacturing Unit approved vide Government Order read at (1) above ;

* To consider allotment of 25 acres of undeveloped land {out of Sy. Nos. 19, 21 (Part), 24, 25, 26, 27, 28 and 29 of Beergondanhalli Village and 29 (Part)}, subject to availability. The project proponent to pay the land cost as per the prevailing norms of KIADB.

* In the absence of undeveloped land, alternatively, 25 acres of developed land in 2nd Phase, Sompura Industrial Area may be considered subject to availability.

* This will be subject to assessment of requirement of land by the Land Audit Committee.

By Order and in the name of the Governor of Karnataka,

**JYOTHI R.J.**

Desk Officer (Technical Cell)

Commerce & Industries Department.

P.R.97

## COMMERCE AND INDUSTRIES SECRETARIAT

**Sub :** Approval to the Project Proposal of M/s. Rajesh Exports Ltd., to establish an "Integrated Township" at different locations in Bangalore Rural & Urban District.

**Read :** Proceedings of the 26th State High Level Clearance Committee (SHLCC) Meeting held on 9-11-2011.

**Preamble :**

M/s. Rajesh Exports Ltd., has proposed to establish an "Integrated Township" at different locations in Bangalore Rural & Urban District, with an investment of Rs. 9500.00 crores, generating employment to about 108000 persons.

In the 26th State High Level Clearance Committee (SHLCC) Meeting held on 9-11-2011, the proposal of the Company was discussed and approved.

Government has examined the recommendations made by the 26th State High Level Clearance Committee Meeting held on 9-11-2011, in all aspects.

Hence the following order.

**GOVERNMENT ORDER NO. CI 284 SPI 2011, BANGALORE, DATED 16-12-2011.**

Government is pleased to accord in principle approval to the Project Proposal of M/s. Rajesh Exports Ltd., to establish an "Integrated Township" at different locations in Bangalore Rural & Urban District, with an investment of Rs. 9500.00 crores, generating employment to about 108000 persons and extend the following infrastructure facilities, incentives and concessions.

**INFRASTRUCTURE FACILITIES :**

1. **Land :** 500 ares of land to be allotted by KIADB on consent by the farmers or to be purchased U/s. 109 of KLR Act at Sondekoppa, Krishna Rajapura & Mylappanahalli Villages of Yalahanka Hobli, Bangalore North Taluk, Bethamagere, Kempadanahalli, Ganakalu Villages of Bidadi Hobli, Ramanagara Taluk, Nidaghatta Village, Hoskote Hobli, Hoskote Taluk & Alurududdanahalli Village, Devenahalli Taluk in Bangalore Rural District and conversion of the same.
2. **Water :** 4.50 MLD of water to be met out of own sources.
3. **Power :** Requird power to be serviced from respective BESCOM.

**GENERAL TERMS AND CONDITIONS :**

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   a) The project proponents shall provide employment to at least one member of the family of each land looser if the land is acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters to take necessary statutory clearances and to comply with the norms and guidelines and approvals from the Local Planning and other Authorities before taking effective steps for implementation of the project.

This approval is valid for a period of two years from the date of issue.

By Order and in the name of the Governor of Karnataka,
**JYOTHI R.J.**
Desk Officer (Technical Cell)
Commerce & Industries Department.

P.R.98

## COMMERCE AND INDUSTRIES SECRETARIAT

**Sub :** Approval to the Project Proposal of M/s. Exedy Clutch India Private Limited to establish manufacturing unit for "Multipurpose, multi plate clutch, continuance variable transmission (CVT), cultch disc and clutch cover assembly and its components for both 2 and 4 wheelers" at Narasapura Industrial area, Kolar District.

**Read :** Proceedings of the 26th State High Level Clearance Committee (SHLCC) Meeting held on 9-11-2011.

**Preamble :**

M/s. Exedy Clutch India Private Limited has proposed to establish manufacturing unit for multi plate clutch, continuance variable transmission (CVT), cultch disc and clutch cover assembly and its components for both 2 and 4 wheelers" at Narasapura Industrial area, Kolar District with an investment of Rs. 242.00 crores, generating employment to about 1000 persons.

In the 26th State High Level Clearance Committee (SHLCC) Meeting held on 9-11-2011, the proposal of the Company wad discussed and approved.

Government has examined the recommendations made by the 26th State High Level Clearance Committee Meeting held on 9-11-2011, in all aspects.

Hence the following order.

**GOVERNMENT ORDER NO. CI 262 SPI 2011, BANGALORE, DATED 16-12-2011.**

Government is pleased to accord in principle approval to the Project Proposal of M/s. . Exedy Clutch India Private Limited to establish manufacturing unit for multi plate clutch, continuance variable transmission (CVT), cultch disc and clutch cover assembly and its components for both 2 and 4 wheelers" at Narasapura Industrial area, Kolar District with an investment of Rs. 242.00 crores, generating employment to about 1000 persons and extend the following infrastructure facilities, incentives and concessions.

**INFRASTRUCTURE FACILITIES :**

1. **Land :** 30 acres of land to be allotted by KIADB at Narasapura Industrial area, Kolar District.
2. **Water :** 300 KLD to be supplied by KIADB.
3. **Power :** 4000 of power to be supplied by BESCOM.
4. **Incentives & Concessions** As per applicable Industrial Policy of the State.

**GENERAL TERMS AND CONDITIONS :**

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   - c) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   - d) The promoters shall take all statutory and other necessary clearances from the competent authorities including GOI and shall submit milestones/progress in implementation of the projects regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

**JYOTHI R.J.**

Desk Officer (Technical Cell)

P.R.99 Commerce & Industries Department.

## COMMERCE AND INDUSTRIES SECRETARIAT

**Sub :** Approval to the Project Proposal of M/s. Haveri Bioenergy Pvt. Ltd., to establish an unit for "10 MW Electricity Generation from Agricultural Wastes" near Gutaal, Haveri Taluk, Haveri District.

**Read :** Proceedings of the 26th State High Level Clearance Committee (SHLCC) Meeting held on 9-11-2011.

**Preamble :**

M/s. Haveri Bioenergy Pvt. Ltd., has proposed to establish an unit for "10 MW Electricity Generation from Agricultural Wastes" near Gutaal, Haveri Taluk, Haveri District, with an investment of Rs. 55.55 crores, generating employment to about 85 persons.

In the 26th State High Level Clearance Committee (SHLCC) Meeting held on 9-11-2011, the proposal of the Company wad discussed and approved.

Government has examined the recommendations made by the 26th State High Level Clearance Committee Meeting held on 9-11-2011, in all aspects.

Hence the following order.

**GOVERNMENT ORDER NO. CI 273 SPI 2011, BANGALORE, DATED 16-12-2011.**

Government is pleased to accord in principle approval to the Project Proposal of M/s. . Haveri Bioenergy Pvt. Ltd., to establish an unit for "10 MW Electricity Generation from Agricultural Wastes" near Gutaal, Haveri Taluk, Haveri District, with an investment of Rs. 55.55 crores, generating employment to about 85 persons and extend the following infrastructure facilities, incentives and concessions.

**INFRASTRUCTURE FACILITIES :**

1. **Land :** 30 acres of land to be purchased U/s 109 of KLR conversion of the same for Industrial use.
2. **Water :** 11.50 Cubic meter per hour to be supplied from local authorities.
3. **Power :** 250 KVA to be serviced by HESCOM.
4. **Incentives & Concessions** As per applicable Industrial Policy of the State.

**GENERAL TERMS AND CONDITIONS :**

1. **Environment :** The promoters as to obtain CFE from KPSCB Environmental clearance from MOEF, GOI / DFEE Gok as applicable.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. & Director of Industries and commerce for monitoring.
3. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
4. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others :**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the projects regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,
**JYOTHI R.J.**
Desk Officer (Technical Cell)
Commerce & Industries Department.

P.R.100

## ಇಂಧನ ಸಚಿವಾಲಯ

**ವಿಷಯ :** ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳ ಸಕ್ರಮೀಕರಣಕ್ಕಾಗಿ ನೊಂದಣಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 9 ಪಿಎಸ್‌ಆರ್ 2011 ದಿನಾಂಕ : 11-03-2011.
2. ಸುತ್ತೋಲೆ ಸಂಖ್ಯೆ : ಇಎನ್ 9 ಪಿಎಸ್‌ಆರ್ 2011 ದಿನಾಂಕ : 27-04-2011.
3. ಸುತ್ತೋಲೆ ಸಂಖ್ಯೆ : ಇಎನ್ 9 ಪಿಎಸ್‌ಆರ್ 2006 ದಿನಾಂಕ : 30-06-2011.

**ಪ್ರಸ್ತಾವನೆ :**

ರಾಜ್ಯದಲ್ಲಿ ಚಾಲ್ತಿಯಲ್ಲಿರುವ ರೈತರ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಉಲ್ಲೇಖ (1)ರ ಅನ್ವಯ ಆದೇಶ ಹೊರಡಿಸಲಾಗಿರುತ್ತದೆ. ಈ ಸಂಬಂಧ ರೈತರು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅರ್ಜಿಗಳನ್ನು ನೋಂದಾಯಿಸಲು ಅಂತಿಮವಾಗಿ ಉಲ್ಲೇಖ (3)ರ ಅನ್ವಯ ದಿನಾಂಕ : 31-07-2011 ರವರೆಗೆ ಗಡುವು ನೀಡಲಾಗಿತ್ತು. ಆದರೆ ಹಲವಾರು ರೈತರಿಗೆ ಈ ಬಗ್ಗೆ ವ್ಯಾಪಕ ಪ್ರಚಾರ ದೊರೆಯದೆ, ಅರ್ಜಿಗಳನ್ನು ಸಕಾಲದಲ್ಲಿ ನಿಗದಿತ ಗಡುವಿನ ದಿನಾಂಕದೊಳಗೆ ನೋಂದಾಯಿಸಲು ಸಾಧ್ಯವಾಗದ ಕಾರಣ, ನೋಂದಣಿ ದಿನಾಂಕವನ್ನು ವಿಸ್ತರಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಮಾನ್ಯ ಶಾಸಕರುಗಳಿಂದ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಂದಲೂ ಸಹ ಕೋರಿಕೆ ಪತ್ರಗಳು ಸ್ವೀಕೃತವಾಗಿರುತ್ತವೆ. ಈ ವಿಷಯವಾಗಿ ಇತ್ತೀಚಿನ ವಿಧಾನ ಸಭೆ ಅಧಿವೇಶನದಲ್ಲಿಯೂ ಸಹ ಮಾನ್ಯ ಶಾಸಕರುಗಳು ಸನ್ಮಾನ್ಯ ಇಂಧನ ಸಚಿವರನ್ನು ದಿನಾಂಕ ವಿಸ್ತರಿಸುವಂತೆ ಮನವಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ರೈತರ ಅನಧಿಕೃತ ಪಂಪ್ ಸೆಟ್‌ಗಳನ್ನು ಸಕ್ರಮೀಕರಣಗೊಳಿಸಲು ಅರ್ಜಿಯನ್ನು ನೋಂದಾಯಿಸಲು ಅವಧಿಯನ್ನು ವಿಸ್ತರಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಎನ್ 09 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ : 23-12-2011**

ರಾಜ್ಯದ ಎಲ್ಲಾ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ರೈತರು ತಮ್ಮ ಅರ್ಜಿಗಳನ್ನು ನೋಂದಾಯಿಸಲು ದಿನಾಂಕ 31-01-2012 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸುರೇಶ್ ಬಿ. ಕೃಷ್ಣಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 105

## ಇಂಧನ ಸಚಿವಾಲಯ

ವಿಷಯ : ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 17.25 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಡಿಇ 26 ಎನ್‌ಸಿಇ 1999, ದಿನಾಂಕ : 13-05-1999.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 259 ಎನ್‌ಸಿಇ 2004, ದಿನಾಂಕ : 18-03-2005.
3. ಸರ್ಕಾರದ ಆದೇಶ ಸಂಖ್ಯೆ : ಇಎನ್ 448 ಎನ್‌ಸಿಇ 2008, ದಿನಾಂಕ : 20-06-2009.
4. ಸರ್ಕಾರದ ಆದೇಶ ಸಂಖ್ಯೆ : ಇಎನ್ 448 ಎನ್‌ಸಿಇ 2008, ದಿನಾಂಕ : 04-03-2011.
5. ಸರ್ಕಾರದ ಆದೇಶ ಸಂಖ್ಯೆ : ಇಎನ್ 448 ಎನ್‌ಸಿಇ 2008, ದಿನಾಂಕ : 02-08-2011.
6. ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಮನವಿ ಪತ್ರ ಸಂಖ್ಯೆ : AMTL/Energy Minister/2011-12/17, ದಿನಾಂಕ : 20-09-2011.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿವಲಯ ಪ್ರದೇಶದ ತುರುವನೂರು (4 ಮೆ.ವ್ಯಾ) ಮತ್ತು ಮದನಾಯಕನಹಳ್ಳಿ (7.2 ಮೆ.ವ್ಯಾ.) ಗ್ರಾಮಗಳಲ್ಲಿ ಒಟ್ಟು 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿ ವಲಯ ಪ್ರದೇಶಗಳಲ್ಲಿ ಹಂಚಿಕೆಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 17.25 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೇಲಿನ ದಿನಾಂಕ : 20-06-2009ರ ಆದೇಶದಲ್ಲಿ ರದ್ದುಪಡಿಸಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು ಯೋಜನೆಯ ಅನುಷ್ಠಾನಕ್ಕಾಗಿ ಕೊನೆಯ ಅವಕಾಶವಾಗಿ ಕಾಲಾವಕಾಶವನ್ನು ಕೆಲವೊಂದು ನಿಬಂಧನೆಗೊಳಪಟ್ಟು ದಿನಾಂಕ : 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿ ವಲಯ ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದ 6.05 ಮೆಗಾ ವ್ಯಾಟ್ ಹೆಚ್ಚುವರಿ ಸಾಮರ್ಥ್ಯ (17.25 – 11.2 =6.05 ಮೆ.ವ್ಯಾ.) ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೂ ಕಾಲಾವಕಾಶವನ್ನು ದಿನಾಂಕ : 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯವರು ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿ ವಲಯ ಪ್ರದೇಶದ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 17.25 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ಡಿಸೆಂಬರ್ 2012ರ ಅಂತ್ಯದವರೆಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

**ಸರ್ಕಾರದ ಆದೇಶ ಸಂಖ್ಯೆ : ಇಎನ್ 448 ಎನ್‌ಸಿಇ 2008 (2), ಬೆಂಗಳೂರು, ದಿನಾಂಕ : 28-12-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿವಲಯ ಪ್ರದೇಶದ ತರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 17.25 ಮೆಗಾ ವ್ಯಾಟ್ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಕಾಲಾವಕಾಶ ವಿಸ್ತರಣೆಯ ಶುಲ್ಕವನ್ನು ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ದಿನಾಂಕ : 31-12-2012 ರವರೆಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸುರೇಶ್ ಬಿ. ಕೃಷ್ಣಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 106

## ಇಂಧನ ಸಚಿವಾಲಯ

ವಿಷಯ : ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಡಿಇ 28 ಎನ್‌ಸಿಇ 1996 (15), ದಿನಾಂಕ : 24-07-1996.
2. ಸರ್ಕಾರದ ಆದೇಶ ಸಂಖ್ಯೆ : ಡಿಇ 46 ಎನ್‌ಸಿಇ 1997, ದಿನಾಂಕ : 24-06-1999.
3. ಸರ್ಕಾರದ ಆದೇಶ ಸಂಖ್ಯೆ : ಡಿಇ 03 ಎನ್‌ಸಿಇ 2002, ದಿನಾಂಕ : 01-04-2002.
4. ಸರ್ಕಾರದ ಆದೇಶ ಸಂಖ್ಯೆ : ಡಿಇ 248 ಎನ್‌ಸಿಇ 2004, ದಿನಾಂಕ : 26-08-2004.
5. ಸರ್ಕಾರದ ಆದೇಶ ಸಂಖ್ಯೆ : ಇಎನ್ 520 ಎನ್‌ಸಿಇ 2008, ದಿನಾಂಕ : 29-06-2010.
6. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-30/ಕಟ್ಟೆಪುರ ಎಂಹೆಚ್‌ಎಸ್/2011/4249 ದಿನಾಂಕ : 31-10/02-11-2011.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಪೇಪರ್ ಪ್ಯಾಕಿಂಗ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರದಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಪೇಪರ್ ಪ್ಯಾಕಿಂಗ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಹೆಸರನ್ನು ಮೆ॥ ಬ್ರೈಟ್ ವಿದ್ಯುತ್ ಕಂಪನಿ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಬ್ರೈಟ್ ವಿದ್ಯುತ್ ಕಂಪನಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಹೆಸರನ್ನು ಮೆ॥ ಕಾವೇರಿ ಹೈಡ್ರೊ ಎನರ್ಜಿ ಲಿಮಿಟೆಡ್ ಎಂದು ಬದಲಾಯಿಸಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಟ್ಟೆಪುರ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೇಲ್ಕಂಡ ಯೋಜನೆಯನ್ನು ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ರವರಿಗೆ ವರ್ಗಾಯಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಸಾಯಿ ನಿರೀಹಾ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿದ್ದ ಮೇಲ್ಕಂಡ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ : 01-10-2009 ರಿಂದ ಮುಂದಿನ 2 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಮೆ॥ ಸಾಯಿ ನಿರೀಹಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಮೇಲ್ಕಂಡ ಯೋಜನೆಯನ್ನು ಅನುಷ್ಠಾನಗೊಳಿಸಲು ನೀಡಿದ್ದ ಅವಧಿಯು ಸೆಪ್ಟೆಂಬರ್ 2011ಕ್ಕೆ ಮುಗಿದಿದ್ದು, ಯೋಜನೆಯು ಅನುಷ್ಠಾನದ ಹಂತದಲ್ಲಿರುವುದರಿಂದ ಅಭಿವೃದ್ಧಿದಾರರ ಕೋರಿಕೆಯ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಮೆಗಾವ್ಯಾಟ್ ಒಂದಕ್ಕೆ ರೂ. 3.00 ಲಕ್ಷಗಳು Performance guarantee ನೀಡತಕ್ಕದ್ದೆಂಬ ಷರತ್ತಿಗೊಳಪಟ್ಟು ಕೊನೆಯ ಅವಕಾಶವಾಗಿ ಕಾಲವಕಾಶವನ್ನು ಮತ್ತೆ ಒಂದು ವರ್ಷದವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

**ಸರ್ಕಾರದ ಆದೇಶ ಸಂಖ್ಯೆ : ಇಎನ್ 428 ಎನ್‌ಸಿಇ 2011, ಬೆಂಗಳೂರು, ದಿನಾಂಕ : 29-12-2011**

ಮೆ॥ ಸಾಯಿ ನಿರೀಹಾ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಕಟ್ಟೆಪುರ ಎಂಬಲ್ಲಿ ಹಂಚಿಕೆಯಾಗಿದ್ದ ಮೇಲ್ಕಂಡ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ಕೊನೆಯದಾಗಿ ದಿನಾಂಕ : 01-10-2011 ರಿಂದ 30-09-2012 ರವರೆಗೆ ಕೆಳಕಂಡ ಷರತ್ತಿಗೊಳಪಟ್ಟು ವಿಸ್ತರಿಸಲಾಗಿದೆ.

1. ಸದರಿ ಯೋಜನೆ ಸಂಬಂಧ, ಸಂಬಂಧಿಸಿದ ಪ್ರಾದೇಶಿಕ ಮತ್ತು ವನ್ಯಜೀವಿ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಹಮತಿ ಪಡೆಯತಕ್ಕದ್ದು.
2. ಮೆಗಾವ್ಯಾಟ್ ಒಂದಕ್ಕೆ ರೂ. 3.00 ಲಕ್ಷಗಳು Performance guarantee ನ್ನು ನೀಡತಕ್ಕದ್ದು.
3. ಈ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸುರೇಶ್ ಬಿ. ಕೃಷ್ಣಪ್ಪನವರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 107

## ವಸತಿ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ನಿಪ್ಪಾಣಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ ಪರಿಷ್ಕೃತ ಆದೇಶ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಂ.ವಇ/42/ಹೆಚ್‌ಎಎಂ/1999, ದಿನಾಂಕ : 10–05–2000.
2. ಸರ್ಕಾರದ ಆದೇಶ ಸಂಖ್ಯೆ : ಸಂ.ವಇ/28/ಹೆಚ್‌ಎಎಂ/2011, ದಿನಾಂಕ : 26–07–2011.
3. ರಾಜ್ಯಾಧ್ಯಕ್ಷರು, ಭಾರತೀಯ ಜನತಾ ಪಾರ್ಟಿ ಇವರ ಪತ್ರ ಸಂಖ್ಯೆ : ರಾಕಾ/ನಾನಿ/506/2011, ದಿನಾಂಕ : 26–10–2011.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪಟ್ಟಣ ಹಾಗೂ ಗ್ರಾಮೀಣ ಪ್ರವೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳನ್ನು ಪುನರ್ ರಚಿಸಿ, ಸಮಿತಿಯ ಸದಸ್ಯರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಿದೆ. ಈ ಪರಿಷ್ಕೃತ ಆದೇಶದನ್ವಯ ಬೆಳಗಾಂ ಜಿಲ್ಲೆ ನಿಪ್ಪಾಣಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿ ಮೇಲೆ ಓದಲಾಗಿರುವ (2)ರ ಆದೇಶವನ್ನು ಹೊರಡಿಸಲಾಗಿತ್ತು. ಓದಲಾಗಿರುವ (3)ರ ಪತ್ರದಲ್ಲಿ ಶಿಫಾರಸ್ಸು ಮಾಡಿ ತಿಳಿಸಿರುವಂತೆ ನಿಪ್ಪಾಣಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ಪರಿಷ್ಕೃತ ಆದೇಶ ನಾಮನಿರ್ದೇಶನ ಮಾಡಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ವಇ 79 ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ : 23–12–2011**

ಬೆಳಗಾಂ ಜಿಲ್ಲೆ ನಿಪ್ಪಾಣಿ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

| ಕ್ರ.ಸಂ. | ಅಭ್ಯರ್ಥಿಯ ಹೆಸರು | ವರ್ಗ |
|---|---|---|
| 1 | ಶ್ರೀಮತಿ ಸುಚಿತ್ರಾ ವೆಂಕಟೇಶ ಕುಲಕರ್ಣಿ,<br>ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು. | ಸಾಮಾನ್ಯ ಮಹಿಳೆ |
| 2 | ಶ್ರೀ ವರ್ದಮಾನ್ ವಸಂತ ನಾಗಾಂವಕರ,<br>ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು. | ಅ.ಸಂ. |
| 3 | ಶ್ರೀ ರೋಹನ ಅಶೋಕ ರಾವೊತ,<br>ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು. | ಹಿಂ.ವ. |
| 4 | ಶ್ರೀ ಸುನೀಲ ಲಕ್ಷ್ಮಣ ಅಕ್ಕೊಳತೆ,<br>ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು. | ಎಸ್.ಸಿ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಶಂಕರಪ್ಪ
ಪೀಠಾಧಿಕಾರಿ–2
ವಸತಿ ಇಲಾಖೆ

ಪಿ.ಆರ್. 109

## ಇಂಧನ ಸಚಿವಾಲಯ

ವಿಷಯ : ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (GIM)ಕ್ಕೆ ಸಮೀಕ್ಷಾಧಿಕಾರಿ (Nodal Officer) ಮತ್ತು ಸಮನ್ವಯಾಧಿಕಾರಿ (Co-ordinating Officer) ಗಳನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ :
1. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅರೆ ಸರ್ಕಾರಿ ಪತ್ರ ಸಂಖ್ಯೆ : KUM/GIM-2012-FOC/2011–12, ದಿನಾಂಕ : 23–07–2011.
2. ಸರ್ಕಾರಿ ಆದೇಶ ಸಂಖ್ಯೆ ಇಎನ್ 85 ಪಿಪಿಸಿ 2011 ದಿನಾಂಕ : 05–09–2011.

ಪ್ರಸ್ತಾವನೆ :

1. ಮೇಲೆ ಓದಲಾದ ಕ್ರಮಸಂಖ್ಯೆ–1ರ ಅರೆಸರ್ಕಾರಿ ಪತ್ರದಲ್ಲಿ ದಿನಾಂಕ 07 ಮತ್ತು 08 ಜೂನ್ 2012ರಂದು ಬೆಂಗಳೂರು ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ (BIEC)ದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (GIM)-2012ರ ಸಮಾವೇಶ ನಡೆಯಲಿದ್ದು, ಕರ್ನಾಟಕ ರಾಜ್ಯದ ಸಮಗ್ರ ಆರ್ಥಿಕ ಬೆಳವಣಿಗೆಗಾಗಿ ಸಾಧ್ಯವಾದ ಎಲ್ಲಾ ಕ್ಷೇತ್ರಗಳಲ್ಲೂ ಬಂಡವಾಳ ಹೂಡಿಕೆ ಬಗ್ಗೆ ಯೋಜಿಸಲಾಗಿದೆ.
2. ಮೇಲಿನ ಅರೆ ಸರ್ಕಾರಿ ಪತ್ರದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ–2012ರಲ್ಲಿ ಹೆಚ್ಚಿನ ಬಂಡವಾಳ ಹೂಡಲು ಸಹಕಾರಿಯಾಗುವಂತೆ ಸಮಾಲೋಚನೆ/ವಿಚಾರಗೋಷ್ಠಿ ನಡೆಸಲು ಇಂಧನ ಇಲಾಖೆಗೆ ಸಂಬಂಧಪಟ್ಟ ಕಾರ್ಯಪಡೆಯನ್ನು ನೇಮಿಸುವಂತೆ ಕೋರಲಾಗಿತ್ತು.
3. ಮೇಲೆ ಓದಲಾದ ಕ್ರಮಸಂಖ್ಯೆ–2ರ ಸರ್ಕಾರಿ ಆದೇಶದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ–2012ರಲ್ಲಿ ಹೆಚ್ಚಿನ ಬಂಡವಾಳ ಹೂಡಲು ಸಹಕಾರಿಯಾಗುವಂತೆ ಸಮಾಲೋಚನೆ/ವಿಚಾರಗೋಷ್ಠಿ ನಡೆಸಲು ಇಂಧನ ಇಲಾಖೆಗೆ ಸಂಬಂಧಪಟ್ಟ ಕಾರ್ಯಪಡೆಯನ್ನು ನೇಮಿಸಲಾಗಿತ್ತು.
4. GIM ಸಮಾವೇಶಗಳ ಬಗ್ಗೆ ಸಮನ್ವಯ ಸಾಧಿಸಲು ಇಂಧನ ಇಲಾಖೆಗೆ ಸಂಬಂಧಿಸಿದಂತೆ ಸಮೀಕ್ಷಾಧಿಕಾರಿ (Nodal Officer) ಮತ್ತು ಸಮನ್ವಯಾಧಿಕಾರಿ (Coordinating Officer)ಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಈ ಸರ್ಕಾರಿ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಇಎನ್ 01 ಪಿಎಸ್ಆರ್ 2011, ಬೆಂಗಳೂರು, ದಿನಾಂಕ : 24-12-2011**

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜನೆಗಾಗಿ ಇಂಧನ ಇಲಾಖೆ ಮತ್ತು ಅಧೀನ ಸಂಸ್ಥೆಗಳು ಮತ್ತು ಸಮಾವೇಶಗಳ ಸಂಯೋಜಕರೊಂದಿಗೆ ಸಮನ್ವಯ ಸಾಧಿಸಲು ಈ ಕೆಳಕಂಡ ಅಧಿಕಾರಿಗಳನ್ನು ಸಮೀಕ್ಷಾಧಿಕಾರಿ (Nodal Officer) ಮತ್ತು ಸಮನ್ವಯಾಧಿಕಾರಿ (Co-ordinating Officer) ಗಳಾಗಿ ನೇಮಿಸಿ ಆದೇಶಿಸಿದೆ.

1. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್. — ಸಮೀಕ್ಷಾಧಿಕಾರಿ Nodal Officer
2. ವಿಶೇಷಾಧಿಕಾರಿ (ಸುಧಾರಣೆ), ಇಂಧನ ಇಲಾಖೆ — ಸಮನ್ವಯಾಧಿಕಾರಿ Co-ordinating Officer
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ)-I, ಇ.ಎಮ್.ಸಿ. ಇಂಧನ ಇಲಾಖೆ

ಕವಿಪ್ರನಿನಿ/ಕವಿನಿನಿ/ಕ್ರೆಡಲ್/ವಿಸಕಂಗಳಿಂದ ಒಬ್ಬ ಅಧಿಕಾರಿಯನ್ನು (ಮುಖ್ಯ ಇಂಜಿನಿಯರ್ (ವಿ)/ಅಧೀಕ್ಷಕ ಇಂಜಿನಿಯರ್ (ವಿ) ಮಟ್ಟದ ಅಧಿಕಾರಿ) ಸಮನ್ವಯ ಅಧಿಕಾರಿಯಾಗಿ ನೇಮಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸುರೇಶ್ ಬಿ. ಕೃಷ್ಣಪ್ಪನವರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 110

## ಇಂಧನ ಸಚಿವಾಲಯ

**ವಿಷಯ :** ಮೆ॥ ಭಾರತ್ ಶುಗರ್ ಮಿಲ್ಸ್ ಲಿಮಿಟೆಡ್ ನಿಂದ ಮೆ॥ ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಕಂಪನಿಯ ಹೆಸರು ಬದಲಾಯಿಸುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ : ಡಿಇ 99 ಎನ್‌ಸಿಇ 2002, ದಿನಾಂಕ : 10-05-2002.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 76 ಎನ್‌ಸಿಇ 2006, ದಿನಾಂಕ : 08-03-2006.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿಎಲ್/04/ಐಸಿಎಸ್/2011-12/4646, ದಿನಾಂಕ : 15-12-2011.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಮೆ॥ ಭಾರತ್ ಶುಗರ್ ಮಿಲ್ಸ್ ಲಿಮಿಟೆಡ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆಸೋರಳ್ಳಿ ಗ್ರಾಮದಲ್ಲಿ 7.5 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಭಾರತ್ ಶುಗರ್ ಮಿಲ್ಸ್ ಲಿಮಿಟೆಡ್ ಕಂಪನಿಗೆ ಸ್ಥಾಪಿತ 7.5 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು 24 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿದೆ ಹಾಗೂ ಯೋಜನಾ ಅನುಷ್ಠಾನ ಪ್ರದೇಶವನ್ನು ಕೆಸೋರಳ್ಳಿ ಗ್ರಾಮದಿಂದ ಹುಲ್ಲೆಟ್ಟಿ ಗ್ರಾಮಕ್ಕೆ ಬದಲಾಯಿಸಿ ಆದೇಶ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೆ॥ ಭಾರತ್ ಶುಗರ್ ಮಿಲ್ಸ್ ಲಿಮಿಟೆಡ್ (ಮೆ॥ ಜೆಎಂಆರ್ ಇಂಡಸ್ಟ್ರೀಸ್ ಲಿಮಿಟೆಡ್‌ನೊಂದಿಗೆ ವಿಲೀನಗೊಳಿಸಿದೆ) ರವರ ಕಂಪನಿಯ ಹೆಸರನ್ನು ಮೆ॥ ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್ ಎಂದು ಬದಲಾಯಿಸುವ ಹಿನ್ನೆಲೆಯಲ್ಲಿ ಪರಿಶೀಲಿಸಿ ಅಗತ್ಯ ಶುಲ್ಕವನ್ನು ಪಾವತಿಸಿಕೊಂಡು ಹೆಸರು ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

**ಸರ್ಕಾರದ ಆದೇಶ ಸಂಖ್ಯೆ : ಇಎನ್ 469 ಎನ್‌ಸಿಇ 2011, ಬೆಂಗಳೂರು, ದಿನಾಂಕ : 21-12-2011**

ಮೆ॥ ಭಾರತ್ ಶುಗರ್ ಮಿಲ್ಸ್ ಲಿಮಿಟೆಡ್ ಕಂಪನಿಯ (ಮೆ॥ ಜೆಎಂಆರ್ ಇಂಡಸ್ಟ್ರೀಸ್ ಲಿಮಿಟೆಎಡ್‌ನೊಂದಿಗೆ ವಿಲೀನಗೊಂಡಿದೆ) ಹೆಸರನ್ನು ಮೆ॥ ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್ ಎಂದು ಬದಲಾಯಿಸಿ ಅನುಮೋದನೆ ನೀಡಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸುರೇಶ್ ಬಿ. ಕೃಷ್ಣಪ್ಪನವರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 111

## ಇಂಧನ ಸಚಿವಾಲಯ

ವಿಷಯ : ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪಿಂಚಣಿ ಹಣ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಇ 14 ಪಿಎಸ್‌ಆರ್ 2002, ದಿನಾಂಕ : 31-05-2002.
2. ಸರ್ಕಾರಿ ಆದೇಶ ಸಂಖ್ಯೆ : ಡಿಇ 15 ಪಿಎಸ್‌ಆರ್ 2002, ದಿನಾಂಕ : 19-12-2002.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 19 ಪಿಎಸ್‌ಆರ್ 2011 ದಿನಾಂಕ : 29-04-2011, 10-06-2011, 03-08-2011 ಮತ್ತು 10-11-2011.
4. ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಲ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳ ಪತ್ರಸಂಖ್ಯೆ ಕೆಇಪಿಜಿಟಿ/ಕ-21/ಸ-1/672-75 ದಿನಾಂಕ : 12-11-2011.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1804 ವೆಚ್ಚ-1/2011, ದಿನಾಂಕ : 16-12-2011.

**ಪ್ರಸ್ತಾವನೆ :**

1. ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕವಿಪ್ರನಿನಿ) ಉದ್ಯಮಗಳು ಮತ್ತು ಆದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣಾ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು, 2002, ನಿಯಮ 4(13)(1) ಪ್ರಕಾರ ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಸೇವೆಗಳನ್ನು ಎರಡನೇ ವರ್ಗಾವಣೆ ದಿನಾಂಕದ ಜಾರಿಗೆ ಮೊದಲು ಮತ್ತು ಕರ್ನಾಟಕ ವಿದ್ಯುತ್ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕವಿಪ್ರನಿನಿ) ನಿರ್ದಿಷ್ಟಪಡಿಸಲಾದ ಸಿಬ್ಬಂದಿಯು ಸಲ್ಲಿಸಿದ ಸೇವೆಗಳಿಗಾಗಿ ನಿವೃತ್ತಿ ವೇತನ ನಿಧಿಗಳು ಮತ್ತು ಶಾಸನ ಪ್ರದತ್ತ ಹಾಗೂ ಇತರೇ ಸಿಬ್ಬಂದಿ ಸಂಬಂಧಿತ ನಿಧಿಗಳ ಸಂಗ್ರಹಣೆಗೆ ರಾಜ್ಯ ಸರ್ಕಾರವು ಜವಾಬ್ದಾರಿಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲ ಮತ್ತು ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಎರಡನೇ ವರ್ಗಾವಣೆ ಜಾರಿಯಾದ ಆಯಾಯ ದಿನಾಂಕದಲ್ಲಿದ್ದಂತೆ ನಿಧಿ ಸಂಗ್ರಹಣೆ ಮಾಡದ ಮಟ್ಟಿಗೆ ರಾಜ್ಯ ಸರ್ಕಾರವು ಹೊಣೆಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲವೆಂದು ತಿಳಿಸಲಾಗಿದೆ.
2. ಮೇಲೆ (2)ರಲ್ಲಿ ಓದಲಾದ ಸರ್ಕಾರ ಆದೇಶದ ಪ್ರಕಾರ, ಕವಿಪ್ರನಿನಿ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟನ್ನು, "ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳೆಂದು" ಮರುನಾಮಕರಣ ಮಾಡಿ, (pay as you go) ಪದ್ಧತಿಯನ್ನು ಅನುಸರಿಸಿ ಕವಿಪ್ರನಿನಿ ಮತ್ತು ಎಸ್ಕಾಂಗಳ ನೌಕರರ ನಿವೃತ್ತಿ ಸೌಲಭ್ಯಗಳನ್ನು (Terminal Benefits) ಪಾವತಿಸಲು ಒಪ್ಪಿಗೆ ನೀಡಿದೆ.
3. 2011-12ನೇ ಸಾಲಿನ ಆಯವ್ಯಯದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪಿಂಚಣಿ ವಂತಿಗೆಗಾಗಿ "2801-80-101-1-13-106 (ಯೋಜನೇತರ)" ಲೆಕ್ಕಶೀರ್ಷಿಕೆಯಡಿ ರೂ. 400.00 ಕೋಟಿಗಳನ್ನು ನಿಗದಿಪಡಿಸಲಾಗಿರುತ್ತದೆ.
4. ಮೇಲೆ ಕ್ರಮಾಂಕ-(3)ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ 2011-12ನೇ ಸಾಲಿಗೆ ರೂ. 300 ಕೋಟಿಗಳಷ್ಟು ಹಣ ಬಿಡುಗಡೆ ಮಾಡಿದೆ.
5. ಮೇಲೆ ಕ್ರಮಾಂಕ-(4)ರಲ್ಲಿ ಓದಲಾದ ಪತ್ರದಲ್ಲಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಅಧ್ಯಕ್ಷರು ಮತ್ತು ನಿರ್ದೇಶಕರು (ಹಣಕಾಸು), ಕವಿಪ್ರನಿನಿರವರು, 2011-12ರ ಆರ್ಥಿಕ ವರ್ಷಕ್ಕೆ ಉಳಿದ ಪಿಂಚಣಿ ಹಣ ರೂ. 100 ಕೋಟಿಗಳನ್ನು ಬಿಡುಗಡೆಗೊಳಿಸಲು ಸರ್ಕಾರವನ್ನು ಕೋರಿರುತ್ತಾರೆ.
6. ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಕೋರಿಕೆಯನ್ನು ಸರ್ಕಾರವು ಪರಿಶೀಲಿಸಿ 2011-12ನೇ ಸಾಲಿಗೆ ರೂ. 50 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಈ ಸರ್ಕಾರಿ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಇಎನ್ 19 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ : 22-12-2011**

ಸರ್ಕಾರವು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ 2011-12ನೇ ಸಾಲಿನಲ್ಲಿ ಪಿಂಚಣಿ ವಂತಿಗೆ ರೂ. 50 ಕೋಟಿಗಳನ್ನು (ಐವತ್ತು ಕೋಟಿ ರೂ.ಗಳು ಮಾತ್ರ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು "2801-80-101-1-13-106" ಸಹಾಯಧನ (ಯೋಜನೇತರ) ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯವರ ಮೇಲು ರುಜುವನ್ನು ಸ್ವೀಕೃತ ರಸೀದಿಯಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು "ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ" ಹಣ ಪಡೆದ 2 ದಿನದೊಳಗೆ ಪೂರ್ಣವಾಗಿ ಪಾವತಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1804 ವೆಚ್ಚ-1/2011 ದಿನಾಂಕ : 16-12-2011ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಸುರೇಶ್ ಬಿ. ಕೃಷ್ಣಪ್ಪನವರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 112

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

**ವಿಷಯ :** ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಖರೀದಿಗಳಿಗೆ (ಸಂಗ್ರಹಣೆ) ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಅನುಸರಿಸುವ ಬಗ್ಗೆ ಮಾರ್ಗಸೂಚಿ ರಚನೆಯ ಕುರಿತು.

**ಪ್ರಸ್ತಾವನೆ :**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಖೆ ವಿವಿಧ ಕೇಂದ್ರ ಪ್ರಾಯೋಜಿತ ಹಾಗೂ ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿದ್ದು, ವಿವಿಧ ಹಂತಗಳಲ್ಲಿ, ಸೇವೆಗಳು, ನಿರ್ಮಾಣ ಕಾಮಗಾರಿಗಳು, ಸಾಮಗ್ರಿಗಳ ಸರಕುಗಳ ಸರಬರಾಜುಗಳ ಸಂಗ್ರಹಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪರದರ್ಶಕತೆ ಅಧಿನಿಯಮ, 1999 ಮತ್ತು ತತ್ಸಂಬಂಧಿತ ನಿಯಮಾವಳಿ, 2000 ರನ್ವಯ ನಿಗದಿಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸುತ್ತಿದೆ. ಈ ರೀತಿಯ ಸಂಗ್ರಹಣಾ ವಿಧಿವಿಧಾನವನ್ನು ಅನುಸರಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಸಂಗ್ರಹಣಾಧಿಕಾರಿಗಳು ಸದರಿ ನಿಯಮಾವಳಿಗಳ ಪೂರ್ಣ ತಿಳುವಳಿಕೆಯೊಂದಿಗೆ ಪಾಲನೆ ಮಾಡದಿರುವುದು ಮತ್ತು ಅದರಿಂದಾಗಿ ದೋಷಪೂರಿತ ಸಂಗ್ರಹಣೆಗಳಿಗೆ ಕಾರಣವಾಗುತ್ತಿರುವುದು ಕಂಡುಬಂದಿದ್ದು ಈ ಬಗ್ಗೆ ಸುಲಭವಾಗಿ ಅರ್ಥೈಸಿಕೊಂಡು ಸಂಗ್ರಹಣಾ ನಿಯಮಾವಳಿಯನ್ನು ಪಾಲನೆ ಮಾಡುವ ನಿಟ್ಟಿನಲ್ಲಿ ಅಗತ್ಯ ಮಾರ್ಗಸೂಚಿಗಳನ್ನು ನೀಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಗೆ ಹೇಳಿರುವ ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ.

ಅದರಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 401 ಜಿಪಸ 2011, ಬೆಂಗಳೂರು, ದಿನಾಂಕ : 27-12-2011**

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಖರೀದಿಗಳಿಗೆ (ಸಂಗ್ರಹಣೆ) ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಮತ್ತು ವಿಧಿವಿಧಾನಗಳನ್ನು ಪಾಲನೆ ಮಾಡಲು ಸುಲಭ ಸಾಧ್ಯವಾಗುವಂತೆ ಮಾರ್ಗಸೂಚಿಯನ್ನು ರಚಿಸಲು ಈ ಕೆಳಕಂಡ ಅಧಿಕಾರಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಅಧ್ಯಕ್ಷರು |
| 2. | ನಿರ್ದೇಶಕರು (ಗ್ರಾ.ಮೂ.ಸೌ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, (MGNRGES) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 4. | ಮುಖ್ಯ ಲೆಕ್ಕಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಸದಸ್ಯರು |
| 5. | ಮುಖ್ಯ ಲೆಕ್ಕಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಬೆಂಗಳೂರು | ಸದಸ್ಯರು |
| 6. | ಹೆಚ್ಚುವರಿ ಮುಖ್ಯಸ್ಥರು (ಹಣಕಾಸು) ಗ್ರಾಮ ಸ್ವರಾಜ್ ಯೋಜನೆ | ಸದಸ್ಯರು |
| 7. | ಮುಖ್ಯಸ್ಥರು, ಡಿ.ಎ.ಸಿ. ಗ್ರಾಮ ಸ್ವರಾಜ್ ಯೋಜನೆ | ಸದಸ್ಯರು |
| 8. | ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ | ಸಂಚಾಲಕರು |

ಶ್ರೀ ತಲ್ಲೂರು ನಿವೃತ್ತ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರು ಈ ಸಮಿತಿಗೆ ಸಲಹೆಗಾರರಾಗಿರುತ್ತಾರೆ.

**ಮಾರ್ಗಸೂಚಿ ರಚನಾ ಸಮಿತಿಯ ಕಾರ್ಯಸೂಚಿ :**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿವಿಧ ಕೇಂದ್ರ ಪ್ರಾಯೋಜಿತ ಹಾಗೂ ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿದ್ದು, ವಿವಿಧ ಹಂತಗಳಲ್ಲಿ, ಸೇವೆಗಳು, ನಿರ್ಮಾನ ಕಾಮಗಾರಿಗಳು, ಸಾಮಗ್ರಿಗಳ ಸರಕುಗಳ ಸರಬರಾಜುಗಳ ಸಂಗ್ರಹಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ತತ್ಸಂಬಂಧಿತ ನಿಯಮಾವಳಿ, 2000 ರನ್ವಯ ನಿಗದಿಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸುತ್ತಿದೆ. ಈ ರೀತಿಯ ಸಂಗ್ರಹಣಾ ವಿಧಿವಿಧಾನವನ್ನು ಅನುಸರಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಸಂಗ್ರಹಣಾಧಿಕಾರಿಗಳು ಸದರಿ ನಿಯಮಾವಳಿಗಳ ಪೂರ್ಣ ತಿಳುವಳಿಕೆಯೊಂದಿಗೆ ಪಾಲನೆ ಮಾಡದಿರುವುದು ಮತ್ತು ಅದರಿಂದಾಗಿ ದೋಷಪೂರಿತ ಸಂಗ್ರಹಣೆಗಳಿಗೆ ಕಾರಣವಾಗುತ್ತಿರುವುದು ಕಂಡುಬಂದಿದ್ದು ಈ ಬಗ್ಗೆ ಸುಲಭವಾಗಿ ಅರ್ಥೈಸಿಕೊಂಡು ಸಂಗ್ರಹಣಾ ನಿಯಮಾವಳಿಯನ್ನು ಪಾಲನೆ ಮಾಡುವ ನಿಟ್ಟಿನಲ್ಲಿ ಅಗತ್ಯ ಮಾರ್ಗಸೂಚಿಗಳನ್ನು ನೀಡಬೇಕಾಗಿರುತ್ತದೆ.

ಮೇಲೆ ವಿವರಿಸಿದ ಕಾರಣಗಳಿಗಾಗಿ ರಚಿಸಲಾದ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು.

(1) ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಾವಳಿ, 2000ನಲ್ಲಿ ನಿಗದಿಪಡಿಸಲಾದ ವಿಧಿ ವಿಧಾನಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಸಂಗ್ರಹಣೆಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ನಿಯಮಗಳ ಪರಿಶೀಲನೆ, ಅನುಪಾಲನೆ ಮತ್ತು ತೊಡಕುಗಳ ಬಗ್ಗೆ ವಿಶ್ಲೇಷಿಸುವುದು.

(2) ನೆರೆಯೊರೆಯ ರಾಜ್ಯಗಳಲ್ಲಿನ ಸಾರ್ವಜನಿಕ ಸಂಗ್ರಹಣಾ ನಿಯಮಾವಳಿಗಳ ಅನುಪಾಲನೆ ಬಗ್ಗೆ ಅಧ್ಯಯಿಸುವುದು.

(3) ಸಾರ್ವಜನಿಕ ಸಂಗ್ರಹಣಾ ವಿಧಿ ವಿಧಾನವನ್ನು ಅನುಸರಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು ವಿಫಲಗೊಳ್ಳಲು ಕಾರಣವಾಗುತ್ತಿರುವ ಅಂಶಗಳ ವಿಶ್ಲೇಷಣೆ.

(4) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಕೇಂದ್ರ/ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ಸಂಗ್ರಹಣೆಗಳ ಕುರಿತಂತೆ ಇರುವ ನಿಯಮಗಳನ್ನು ಅಧ್ಯಯಿಸುವುದು.

ಮೇಲೆ ತಿಳಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಸೇವೆಗಳು, ನಿರ್ಮಾಣ ಕಾಮಗಾರಿಗಳು, ಸರಕು ಸಾಮಗ್ರಿಗಳ ಸರಬರಾಜು ಇತ್ಯಾದಿ ಸಂಗ್ರಹಣೆಯಲ್ಲಿ ಅನುಸರಿಸಬೇಕಾದ ವಿಧಾನಗಳನ್ನು ಸುಲಭಸಾಧ್ಯವಾಗುವ ರೀತಿಯಲ್ಲಿ ಮಾರ್ಗಸೂಚಿಯನ್ನು ತಯಾರಿಸುವುದು.

ಈ ಮಾರ್ಗಸೂಚಿಯ ಕರಡನ್ನು 3 ತಿಂಗಳೊಳಗೆ ಸಿದ್ಧಪಡಿಸಿ ಪರಿಶೀಲನೆಗಾಗಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಹೆಚ್. ಬಿ. ರಘುನಾಥ್**

ಸರ್ಕಾರದ ಅಧೀನ ಕಾರ್ಯದರ್ಶಿ

ಗ್ರಾ.ಅ. & ಪಂ.ರಾಜ್ ಇಲಾಖೆ

ಪಿ.ಆರ್. 113

## ಒಳಾಡಳಿತ ಸಚಿವಾಲಯ

**ವಿಷಯ :** ಪೊಲೀಸು ಸುಧಾರಣೆಗಳು– 'ಪೊಲೀಸ್ ದೂರುಗಳ ಪ್ರಾಧಿಕಾರ'ದ ರಚನೆ – ಕುರಿತು.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 59 ಪೊಸಇ 2009 ದಿನಾಂಕ: 03–12–2010.

2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ: ಆರ್‌ಎಲ್‌ಎಸ್ (1) 7/2011-12 ದಿನಾಂಕ: 04–07–2011.

**ಪ್ರಸ್ತಾವನೆ :**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಹಾಗೂ ಜಿಲ್ಲಾ ಮಟ್ಟದ ಪೊಲೀಸ್ ದೂರುಗಳ ಪ್ರಾಧಿಕಾರಗಳನ್ನು ರಚಿಸಿದೆ. ಸದರಿ ದೂರು ಪ್ರಾಧಿಕಾರಗಳಿಗೆ ಸಹಾಯಕವಾಗಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ವಿವಿಧ ದರ್ಜೆಯ 12 ಹುದ್ದೆಗಳು ಹಾಗೂ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ವಿವಿಧ ದರ್ಜೆಯ 06 ಹುದ್ದೆಗಳನ್ನು ಸೃಜಿಸಿದೆ.

ಮೇಲೆ ಓದಲಾದ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರದಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಲ್ಲಿ ಸಹಾಯಕರಾಗಿ ಸೃಜಿಸಿರುವ ಒಟ್ಟು 222 ಹುದ್ದೆಗಳಿಗೆ ತಗಲುವ ಆವರ್ತಕ ವೆಚ್ಚ ರೂ. 4,25,60,364/- ಹಾಗೂ ಅನಾವರ್ತಕ ವೆಚ್ಚ ರೂ. 70,78,000/– ಗಳಿಗೆ ಹೆಚ್ಚುವರಿ ಅನುದಾನ ಕೋರಿದ್ದಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 90 ಇಎಫ್‌ಎಸ್ 2011, ಬೆಂಗಳೂರು, ದಿನಾಂಕ : 22ನೇ ಡಿಸೆಂಬರ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 59 ಪೊಸಇ 2009 ದಿನಾಂಕ: 03–12–2010ನ್ನು ಹುದ್ದೆಗಳ ಮಂಜೂರಾತಿಗೆ ಸಂಬಂಧಿಸಿದಂತೆ ಭಾಗಶಃ ಮಾರ್ಪಡಿಸಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ಸಹಾಯಕವಾಗಿ ಸೃಜಿಸಿರುವ ಹುದ್ದೆಗಳನ್ನು ಕೆಳಕಂಡಂತೆ ಮಾರ್ಪಾಟು ಮಾಡಿ ಒಟ್ಟು 109 ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಿದೆ.

| ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ | ಹುದ್ದೆಗಳು |
|---|---|
| 1) ಪ್ರಥಮ ದರ್ಜೆ ಸಹಾಯಕ | 01 |
| 2) ಡ್ರೈವರ್ | 01 |
| ಒಟ್ಟು | 02 |

ಡ್ರೈವರ್ ಹುದ್ದೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಭರ್ತಿ ಮಾಡತಕ್ಕದ್ದು.

| ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರ | ಹುದ್ದೆಗಳು |
|---|---|
| 1) ಪ್ರಥಮ ದರ್ಜೆ ಸಹಾಯಕ (1 X 35) | 35 |
| ಒಟ್ಟು | 35 |

ಮೇಲ್ಕಂಡ ಎರಡೂ ಪ್ರಾಧಿಕಾರಗಳಿಗೆ ಅಗತ್ಯವಿರುವ ಶೀಘ್ರಲಿಪಿಗಾರ್ತಿ/ಬೆರಳಚ್ಚುಗಾರರ ಹಾಗೂ ಗ್ರೂಪ್–ಡಿ ದರ್ಜೆಯ 2 X 36=72 ಹುದ್ದೆಗಳನ್ನು ಖಾಯಂ ಹುದ್ದೆಗಳನ್ನಾಗಿ ಸೃಜಿಸದೆ ಅವುಗಳನ್ನು ತಾತ್ಕಾಲಿಕ ಹುದ್ದೆಗಳಾಗಿ ಸೃಜಿಸಿದೆ. ಸದರಿ ಹುದ್ದೆಗಳ ಸೇವೆಯನ್ನು ಬಾಹ್ಯ ಮೂಲದಿಂದ (Service Outsourcing) ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ನಿಯಮಗಳನ್ವಯ ಪಡೆಯತಕ್ಕದ್ದು.

ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರವಾಗಿ ಸಂಬಂಧಪಟ್ಟ ಜಿಲ್ಲೆಗಳ ಪ್ರಾದೇಶಿಕ ಆಯುಕ್ತರನ್ನು ನೇಮಕ ಮಾಡಿರುವುದರಿಂದ ಜಿಲ್ಲಾ ದೂರು ಪ್ರಾಧಿಕಾರಕ್ಕೆ ಡ್ರೈವರ್ ಹುದ್ದೆಯ ಅಗತ್ಯವಿರುವುದಿಲ್ಲ.

ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2055–00–001–0–01–002–003 ವೇತನಗಳು ಇದರಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 319 ವೆಚ್ಚ 11/2011 ದಿನಾಂಕ: 23–11–2011ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪಿ.ಆರ್. 114

## ಯುವಜನ ಸೇವಾ ಸಚಿವಾಲಯ

**ವಿಷಯ :** ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರ 2008–09ನೇ ಸಾಲಿನ ಕಾರ್ಯ ನಿರ್ವಹಣಾ ವರದಿಯಲ್ಲಿ ಇರುವ ಪ್ರತಿಕೂಲ ಷರಾವನ್ನು ಸ್ಥಿರೀಕರಿಸುವ ಬಗ್ಗೆ–ಆದೇಶ.

**ಓದಲಾಗಿದೆ :** 1. ದಿನಾಂಕ: 20–05–2010, 7/13–07–2010 ಮತ್ತು 30–07–2010ರ ಡಿವೈಎಸ್‌ಎಸ್/ಪಿಎಸ್/2010–11ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪತ್ರಗಳು.

2. ದಿನಾಂಕ: 20–09–2010ರ ಐಜಿಪಿ/ಹೆಚ್‌ಆರ್‌ಸಿ/37/2010 ನೇ ಸಂಖ್ಯೆಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಇವರ ಪತ್ರ.

**ಪ್ರಸ್ತಾವನೆ :**

ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರ 2008–09ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಯ ಭಾಗ-3ರ ವರದಿ ಮಾಡುವ ಪ್ರಾಧಿಕಾರದ ಕಾಲಂನಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಂದಿ

ಆಯುಕ್ತರಾಗಿದ್ದ ಶ್ರೀ ಎನ್.ಎಸ್. ಮೇಘರಿಖ್ ರವರು ಪ್ರತಿಕೂಲ ಷರಾವನ್ನು ನಮೂದಿಸಿರುತ್ತಾರೆ. ಈ ಪ್ರತಿಕೂಲ ಷರಾವನ್ನು ಅಂಗೀಕಾರ ಪ್ರಾಧಿಕಾರವಾಗಿ ಯುವಜನ ಸೇವಾ ಇಲಾಖೆಯ ಅಂದಿನ ಸರ್ಕಾರದ ಕಾರ್ಯದರ್ಶಿರವರು ಅಂಗೀಕರಿಸಿರುತ್ತಾರೆ. ಈ ಪ್ರತಿಕೂಲ ಷರಾದ ಬಗ್ಗೆ ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರು ಸಲ್ಲಿಸಿರುವ ವಿವರಣೆಯನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸದರಿಯವರ ವಿವರಣೆಯನ್ನು ಒಪ್ಪುವ ಬಗ್ಗೆ ಅಂದಿನ ಆಯುಕ್ತರಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆಯುವಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ: 20-05-2010ರ ಪತ್ರದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಕೋರಿದ್ದರು.

ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರು ಸುಮಾರು ವರ್ಷಗಳಿಂದ ಕುಡಿಯುವ ಅಭ್ಯಾಸವನ್ನಿಟ್ಟುಕೊಂಡಿರುತ್ತಾರೆ; ಕಚೇರಿಗೆ ಪಾನಮತ್ತರಾಗಿ ಬರುತ್ತಿದ್ದುದು ಸರ್ವೆಸಾಮಾನ್ಯವಿದ್ದು, ಎಲ್ಲಾ ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರಿಗೆ ಗೊತ್ತಿರುವ ವಿಷಯವಾಗಿದ್ದು, ಪಾನಮತ್ತರಾಗಿ ಬಂದ ಹಲವು ಸಂದರ್ಭಗಳನ್ನು ಉಲ್ಲೇಖಿಸುತ್ತಾ, ಸದರಿ ಅಧಿಕಾರಿರವರ 2008-09ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿ ತಾವು ಬರೆದಿರುವ ಪ್ರತಿಕೂಲ ಷರಾವನ್ನು ತೆಗೆದುಹಾಕುವುದು ಸೂಕ್ತವಲ್ಲವೆಂದು ಪರಿಗಣಿಸುವಂತೆ ಶ್ರೀ ಎನ್.ಎಸ್. ಮೇಘರಿಖ್, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಂದಿನ ಆಯುಕ್ತರು ಹಾಗೂ ಹಾಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರ 2008-09ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿ, ಇದರಲ್ಲಿನ ಪ್ರತಿಕೂಲ ಷರಾದ ಸಂಬಂಧ ಸದರಿ ಅಧಿಕಾರಿರವರು ಸಲ್ಲಿಸಿರುವ ದಿನಾಂಕ 26-01-2010 ರ ಮನವಿಯಲ್ಲಿನ ಅಂಶಗಳು ಹಾಗೂ ಅಂದಿನ ಆಯುಕ್ತರು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮತ್ತು ವಾರ್ಷಿಕ ಕಾರ್ಯನಿರ್ವಹಣಾ ವರದಿಯ ವರದಿ ಮಾಡುವ ಪ್ರಾಧಿಕಾರ ಇವರ ವರದಿಯನ್ನು ಪರಿಶೀಲಿಸಿ, ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ : ಯುಸೇಇ 76 ಯುಇಸೇ 2010 ಬೆಂಗಳೂರು, ದಿನಾಂಕ : 22ನೇ ಡಿಸೆಂಬರ್ 2011**

ಪ್ರಸ್ತಾವನೆಯಲ್ಲಿನ ವಿವರಣೆಗಳ ಹಿನ್ನೆಲೆಯಲ್ಲಿ ಶ್ರೀ ಎ.ಎಂ. ಮಹಾದೇವಪ್ಪ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ 2008-09ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿನ ವರದಿ ಪ್ರಾಧಿಕಾರ/ಪುನರಾವಲೋಕನ ಪ್ರಾಧಿಕಾರ ಹಾಗೂ ಅಂಗೀಕಾರ ಪ್ರಾಧಿಕಾರಗಳು ದಾಖಲಿಸಿರುವ ಪ್ರತಿಕೂಲ ಷರಾವನ್ನು ಸಲಹಾತ್ಮಕ ಷರಾ ಎಂದು ಪರಿಗಣಿಸದೆ, "ಪ್ರತಿಕೂಲ ಷರಾ" ಎಂದೇ ಪರಿಗಣಿಸಿ, ಈ ಮೂಲಕ ಸ್ಥಿರೀಕರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ. ಶ್ರೀನಿವಾಸ್

ಸರ್ಕಾರದ ಅಧೀನ ಕಾರ್ಯದರ್ಶಿ,

ಯುವಜನ ಸೇವಾ ಇಲಾಖೆ.

ಪಿ.ಆರ್. 115

## ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

**ವಿಷಯ :** ಬೇಲಿಕೇರಿ ಮತ್ತು ಕಾರವಾರ ಬಂದರುಗಳಲ್ಲಿ ಅನಧಿಕೃತವಾಗಿ ಸಾಗಿಸಿ ದಾಸ್ತಾನಿರಿಸಿದ್ದ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡು ಹೂಡಿರುವ ಅರಣ್ಯ ಮೊಕದ್ದಮೆಗಳ ಸಂಪೂರ್ಣ ತನಿಖೆಯನ್ನು ಸಿಐಡಿಗೆ ವಹಿಸಿರುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ : ಒಇ 91 ಸಿಐಡಿ 2011, ಬೆಂಗಳೂರು, ದಿನಾಂಕ: 28-09-2011.
2. Deputy Inspector General of Police, CID, ಬೆಂಗಳೂರು ರವರ ಪತ್ರ ಸಂಖ್ಯೆ: 1/ಸಿಸಿಆರ್/ಸಿಐಡಿ/2011-12, ದಿನಾಂಕ 12-10-2011.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಒಳಾಡಳಿತ ಇಲಾಖೆಯು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಕೋರಿಕೆಯ ಮೇರೆಗೆ ಬೇಲಿಕೇರಿ ಮತ್ತು ಕಾರವಾರ ಬಂದರುಗಳಲ್ಲಿ ಅನಧಿಕೃತವಾಗಿ ಸಾಗಿಸಿ ದಾಸ್ತಾನಿರಿಸಿದ್ದ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡು ಹೂಡಿರುವ ಅರಣ್ಯ ಮೊಕದ್ದಮೆಗಳ ಸಂಪೂರ್ಣ ತನಿಖೆಯನ್ನು ಸಿಐಡಿಗೆ ವಹಿಸಿ ಆದೇಶ ಮಾಡಿರುತ್ತದೆ.

ಮೇಲೆ ಓದಲಾಗಿರುವ (2)ರ ಪತ್ರದಲ್ಲಿ Deputy Inspector General of Police, CID, Bangalore ಇವರು ಓದಲಾಗಿರುವ ಸರ್ಕಾರದ (1) ರ ಆದೇಶದಲ್ಲಿ ಬೇಲಿಕೇರಿ ಮತ್ತು ಕಾರವಾರ ಬಂದರುಗಳಲ್ಲಿ ಅನಧಿಕೃತವಾಗಿ ಸಾಗಿಸಿ ದಾಸ್ತಾನಿರಿಸಿದ್ದ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡು ಹೂಡಿರುವ ಅರಣ್ಯ ಮೊಕದ್ದಮೆಗಳ ಸಂಪೂರ್ಣ ತನಿಖೆಯನ್ನು ಸಿಐಡಿಗೆ ವಹಿಸಿರುವುದರಿಂದ, ತನಿಖಾ ಕಾರ್ಯವನ್ನು ಸುಗಮವಾಗಿ ಮಾಡಲು ಅರಣ್ಯ ಇಲಾಖೆಯಿಂದ ವಿಷಯವನ್ನು ಚೆನ್ನಾಗಿ ಬಲ್ಲ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿರವರುಗಳನ್ನು ಕ್ರಮವಾಗಿ ನೋಡಲ್ ಮತ್ತು ಸಹಾಯಕ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡುವಂತೆ ಕೋರಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರನ್ನು ನೋಡಲ್ ಅಧಿಕಾರಿಯನ್ನಾಗಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲ ಉಪ ವಿಭಾಗ, ಅಂಕೋಲ ರವರನ್ನು ಸಹಾಯಕ ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಅಪಜೀ 112 ಎಫ್‌ಎಫ್‌ಎಂ 2010 (ಭಾಗ-3), ಬೆಂಗಳೂರು, ದಿನಾಂಕ : 27ನೇ ಡಿಸೆಂಬರ್ 2011**

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು, ಬೇಲಿಕೇರಿ ಮತ್ತು ಕಾರವಾರ ಬಂದರುಗಳಲ್ಲಿ ಅನಧಿಕೃತವಾಗಿ ಸಾಗಿಸಿ ದಾಸ್ತಾನಿರಿಸಿದ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡು ಹೂಡಿರುವ ಅರಣ್ಯ ಮೊಕದ್ದಮೆಗಳ ಸಂಪೂರ್ಣ ತನಿಖೆಯನ್ನು ಸಿಐಡಿಗೆ ವಹಿಸಿದ್ದು, ತನಿಖೆಗೆ ಸಹಾಯ ಮಾಡಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರನ್ನು ನೋಡಲ್ ಅಧಿಕಾರಿಯನ್ನಾಗಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲ ಉಪ ವಿಭಾಗ, ಅಂಕೋಲ ಇವರನ್ನು ಸಹಾಯಕ ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಹೆಚ್. ಅನಸೂಯಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. 116

## ಕಂದಾಯ ಸಚಿವಾಲಯ

**ವಿಷಯ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

**ಓದಲಾಗಿದೆ :** ಸರ್ಕಾರದ ಆದೇಶ ಸಂಖ್ಯೆ: ಕಂಇ 107 ಮುಸರ 2008 (ಭಾ), ದಿನಾಂಕ: 25-02-2009.

**ಪ್ರಸ್ತಾವನೆ :**

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಲು ಆದೇಶಿಸಲಾಗಿತ್ತು.

| | | |
|---|---|---|
| 1 | ಮಾನ್ಯ ವಿಧಾನಸಭಾ ಸದಸ್ಯರು, ನೆಲಮಂಗಲ ವಿಧಾನಸಭಾ ಕ್ಷೇತ್ರ | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸದಸ್ಯರು |
| 3 | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನೆಲಮಂಗಲ ತಾಲ್ಲೂಕು | ಸದಸ್ಯರು |
| 4 | ತಹಶೀಲ್ದಾರ್, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸದಸ್ಯ ಕಾರ್ಯದರ್ಶಿ |

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 32 ಮುಸರ 2011 ಬೆಂಗಳೂರು, ದಿನಾಂಕ : 23ನೇ ಡಿಸೆಂಬರ್ 2011**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧೀಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

| ಕ್ರಸಂ. | ಹೆಸರು / ವಿಳಾಸ | ಪ್ರವರ್ಗ |
|---|---|---|
| 1 | ಶ್ರೀ ವಾಸುದೇವಮೂರ್ತಿ ಬಿನ್ ಎಸ್.ಸಂಪಂಗಿ ರಾಮಶೆಟ್ಟಿ, ತ್ಯಾಮಗೊಂಡ್ಲು, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸಾಮಾನ್ಯ |
| 2 | ಶ್ರೀಮತಿ ಸವಿತ ಬಿನ್ ಲೇಟ್, ತಲಕಾಡು ಸುಬ್ಬರಾಯರ ಬೀದಿ, ನೆಲಮಂಗಲ ಟೌನ್, ನೆಲಮಂಗಲ | ಮಹಿಳೆ |
| 3 | ಶ್ರೀ ಮುನಿರಾಜು ಬಿನ್ ಗಂಗಹನುಮಯ್ಯ, ಆಂಜನೇಯ ದೇವಸ್ಥಾನದ ರಸ್ತೆ, ಕೆಂಪಲಿಂಗನಹಳ್ಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಪರಿಶಿಷ್ಟ ಜಾತಿ |
| 4 | ಶ್ರೀ ಜಯರಾಜು ಬಿನ್ ಸಿದ್ದರಂಗಯ್ಯ, ಹೆಗ್ಗುಂದ, ನರಸೀಪುರ ಅಂಚೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಪರಿಶಿಷ್ಟ ಪಂಗಡ |

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 117